ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 ಸಂಚಿಕೆ 43 ಅಕ್ಟೋಬರ್ 26, 1980 ಬೆಲೆ : 50 ಪೈಸೆ

ಮಾತುಕತೆ ಸ್ಥಗಿತ

ಕೇಂದ್ರ ಸರಕಾರ ಮತ್ತು ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘಟನೆ ಹಾಗೂ ಅಖಿಲ ಅಸ್ಸಾಂ ಗಣ ಸಂಗ್ರಾಮ್ ಪರಿಷತ್ ನಡುವೆ ನಡೆಯುತ್ತಿದ್ದ ಮಾತುಕತೆಯು ವಿಫಲವಾಗಿದೆ. ಕಳೆದ ಒಂದು ವರ್ಷದಿಂದೀಚೆಗೆ ಅಸ್ಸಾಂನಲ್ಲಿ ಚಳುವಳಿಯು ಬೆಳೆದಿರುವ ರೂಪ, ಚಳುವಳಿಯ ಹಿನ್ನೆಲೆ ಮತ್ತು ಚಳುವಳಿಯ ಮುಂದಾಳುಗಳು ವಹಿಸಿರುವ ಸಂಕುಚಿತ ಹಾಗೂ ಛಿದ್ರಕಾರಿ ಧೋರಣೆಗಳ ಬಗ್ಗೆ ತಿಳುವಳಿಕೆ ಇರುವವರಿಗೆ ಮಾತುಕತೆಯು ಯಶಸ್ವಿಯಾಗದಿರುವುದರಲ್ಲಿ ಏನೂ ಆಶ್ಚರ್ಯ ಕಾಣುವುದಿಲ್ಲ

ಸ್ವಾತಂತ್ರ್ಯಾನಂತರ ದೇಶದಲ್ಲಿ ಆರ್ಥಿಕ ಮತ್ತು ರಾಜಕೀಯ ಅಧಿಕಾರಗಳು ಕೇಂದ್ರೀಕೃತವಾಗುತ್ತಾ ಬಂದಿರುವ ಹಿನ್ನೆಲೆಯಲ್ಲಿ ಅಸ್ಸಾಂ ಸೇರಿದಂತೆ ಹಲವು ರಾಜ್ಯ ಮತ್ತು ಪ್ರದೇಶ, ಒಂದೊಂದು ರಾಜ್ಯದೊಳಗೆ ಬೇರೆ ಬೇರೆ ಪ್ರದೇಶ, ರಾಷ್ಟ್ರದಾದ್ಯಂತ ಗ್ರಾಮಾಂತರ ಪ್ರದೇಶ-ಹೀಗೆ ಇವೆಲ್ಲಾ ಹಿಂದುಳಿಯುವಂತಾಗಿದೆ ಅಥವಾ ಸಾಕಷ್ಟು ಬೆಳವಣಿಗೆಯಾಗಿಲ್ಲ. ರಾಷ್ಟ್ರದಾದ್ಯಂತ ಎಲ್ಲಾ ಪ್ರದೇಶಗಳ ಮತ್ತು ಎಲ್ಲಾ ಜನತೆಯ ಸರ್ವತೋಮುಖ ಪ್ರಗತಿ ಹಾಗೂ ಅಭಿವೃದ್ಧಿಯಾಗಿಲ್ಲ. ಅಸ್ಸಾಮಿನಂತಹ

ಸಂಪಾದಕೀಯ

ಗಡಿನಾಡು ರಾಜ್ಯಗಳಿಗೆ ಭಾರತ-ಪಾಕಿಸ್ತಾನ ವಿಭಜನೆಯ ಪರಿಣಾಮವಾಗಿ ವಲಸೆ ಬಂದಿರುವವರ ಸಮಸ್ಯೆಯೂ ಇದೆ. ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಅಸ್ಸಾಮಿನಲ್ಲಿರುವ ಎಲ್ಲಾ ಜನತೆ ಎಲ್ಲಾ ರೀತಿಯಲ್ಲಿ ಶೋಷಣೆ ನಡೆಸುವ ಸ್ಥಾಪಿತ ಹಿತಾಸಕ್ತಿಗಳಿಂದ ವಿಮೋಚನೆ ಪಡೆಯುವುದೇ ಹೊರತು, ಭಾರತ ದೇಶದಿಂದ ಪ್ರತ್ಯೇಕವಾಗುವುದರಿಂದಲ್ಲ; ಅಥವಾ ಅಸ್ಸಾಮಿನವರಲ್ಲದವರನ್ನು, ಹಲವಾರು ವರ್ಷಗಳಿಂದ ಅಲ್ಲಿರುವ ಜನಸಾಮಾನ್ಯರನ್ನು ಅಲ್ಲಿಂದ ಒದ್ದೋಡಿಸುವುದರಿಂದಲ್ಲ.

ಸಮಸ್ಯೆಗೆ ಸರಿಯಾದ ವೈಜ್ಞಾನಿಕ ಪರಿಹಾರ ಹುಡುಕುವುದರ ಬದಲು, ಛಿದ್ರಕಾರಿ ಹಾಗೂ ಕೋಮು ಸ್ವರೂಪದ ಹೋರಾಟವನ್ನು ಬೆಳೆಸಿದ ಅಸ್ಸಾಮಿನ ಪ್ರತ್ಯೇಕತಾ ಚಳುವಳಿಯ ಮುಖಂಡರಿಗೆ ತಮ್ಮ ಬೆಂಬಲಿಗರ ಮೇಲಿದ್ದ ಹಿಡಿತ ಸಡಿಲವಾಗುವ ಲಕ್ಷಣ ಕಂಡುಬಂದಿದೆ. ಇದರೊಂದಿಗೆ ಅಲ್ಪಸಂಖ್ಯಾತರು, ಅಸ್ಸಾಮಿನ ಗುಡ್ಡಗಾಡು ಜನಾಂಗದವರು ಮತ್ತು ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳು ಪ್ರತ್ಯೇಕತಾ ಚಳುವಳಿಯ ವಿರುದ್ಧ ಜನಾಭಿಪ್ರಾಯವನ್ನು ಮೂಡಿಸುವುದಕ್ಕೆ ನಡೆಸಿದ ಪ್ರಯತ್ನಗಳೂ ಫಲಕಾರಿಯಾಗುತ್ತಲಿವೆ ಈ ಹಿನ್ನೆಲೆಯಲ್ಲಿ ಮಾತುಕತೆ ಪ್ರಾರಂಭವಾಗಿತ್ತು.

(ಕಡೇ ಪುಟ ನೋಡಿ)

ಸಂಯುಕ್ತ ಹೋರಾಟಕ್ಕೆ ರಾಜ್ಯಸಮಿತಿ ಕರೆ

ಅಕ್ಟೋಬರ್ ೨೧ ಮತ್ತು ೨೨ರಂದು ಮಂಗಳೂರಿನಲ್ಲಿ ರಾಜ್ಯಸಮಿತಿಯ ಸದಸ್ಯರು ಮತ್ತು ಬೇರೆ ಬೇರೆ ಪ್ರದೇಶಗಳ ಪ್ರಮುಖ ಕಾಮ್ರೇಡ್‌ಗಳ ವಿಶೇಷ ಸಭೆ ಸೇರಿ ಪ್ರಸಕ್ತ ರಾಜಕೀಯ ಪರಿಸ್ಥಿತಿಯನ್ನು ವಿಶ್ಲೇಷಿಸಿತು.

ಜುಲೈ 18, 19, 20ರಂದು ತುಮಕೂರಿನಲ್ಲಿ ರಾಜ್ಯಸಮಿತಿ ಸಭೆ ಸೇರಿದ ಮೇಲೆ ಅಂತರಾಷ್ಟ್ರೀಯ, ರಾಷ್ಟ್ರೀಯ ಮತ್ತು ಕರ್ನಾಟಕ ರಾಜ್ಯದಲ್ಲಿನ ರಾಜಕೀಯ ಬೆಳವಣಿಗೆಗಳ ಬಗ್ಗೆ ವಿಮರ್ಶಿಸಲು ಮತ್ತು ರಾಜ್ಯದಲ್ಲಿ ಸಿ. ಪಿ. ಐ., ಕಾಂಗ್ರೆಸ್ (ಯು), ಲೋಕದಳದಂತಹ ಪಕ್ಷಗಳೊಂದಿಗೆ ಸೇರಿ ಜಂಟೀ ಕಾರ್ಯಕ್ರಮಗಳನ್ನು ಹಾಕುವುದರ ಬಗ್ಗೆ ನಿರ್ದಿಷ್ಟ ಸೂಚನೆಗಳನ್ನು ಚರ್ಚಿಸಲು ಸಭೆ ಸೇರಿ ಕೆಳಕಂಡ ತೀರ್ಮಾನಗಳನ್ನು ಅಂಗೀಕರಿಸಲಾಯಿತು.

ನಿರ್ಣಯಗಳು

ಜಂಟೀ ಹೋರಾಟಕ್ಕೆ ಕರೆ :

ರಾಷ್ಟ್ರಮಟ್ಟದಲ್ಲಿ ಆರು ಪಕ್ಷಗಳು ಸಿ. ಪಿ. ಐ (ಎಂ), ಸಿ. ಪಿ. ಐ., ಕಾಂಗ್ರೆಸ್(ಯು), ಆರ್. ಎಸ್. ಪಿ., ಫಾರ್ವರ್ಡ್ ಬ್ಲಾಕ್ ಮೊದಲಾದವುಗಳ ಜೊತೆಸೇರಿ ಸಮಾವೇಶ ನಡೆಸಿರುವುದನ್ನು ಸ್ವಾಗತಿಸುವವು. ರಾಜ್ಯಮಟ್ಟದಲ್ಲಿ ಈ ಸಮಾವೇಶ ಜರುಗಿಸುವದಕ್ಕೆ ಪ್ರಯತ್ನಿಸಿ ತೀವ್ರವಾದಿ ಕಾರ್ಯಕ್ರಮ ರೂಪಿಸಲು ರಾಜ್ಯ ಸಮಿತಿ ತೀರ್ಮಾನ ಕೈಗೊಂಡಿದೆ,

ರೈತ ಚಳುವಳಿ ಬಗ್ಗೆ :

ಸ್ವಾತಂತ್ರ್ಯ ನಂತರ ದೇಶವನ್ನಾಳಿಕೊಂಡು ಬಂದ ಭೂಮಾಲೀಕ ಬಂಡವಾಳಶಾಹಿ ಪಕ್ಷಗಳು ಅನುಸರಿಸಿಕೊಂಡ ಬಂಡವಾಳಶಾಹಿ ಪಥ, ಅಂದರೆ ರೈತರು, ಕಾರ್ಮಿಕರು ಮತ್ತು ಜನಸಾಮಾನ್ಯರನ್ನು ಸುಲಿಗೆ ಮಾಡಿ ದೊಡ್ಡ ಬಂಡವಾಳಗಾರರನ್ನು ಬೆಳೆಸುವ ಧೋರಣೆಯಿಂದಾಗಿ ರೈತರು, ಜನಸಾಮಾನ್ಯರು ದಿವಾಳಿಯಾಗಿದ್ದಾರೆ. ಪರಿಣಾಮವಾಗಿ ರೈತರೆಲ್ಲಾ ಒಂದಾಗಿ ನಡೆಸುವ ಹೋರಾಟಕ್ಕೆ ಸಿ. ಪಿ ಐ (ಎಂ) ಬೆಂಬಲವೀಯುತ್ತದೆ. ಅದರೊಂದಿಗೆ, ಅತ್ಯಂತ ಶೋಷಣೆಗೊಳಗಾದಿರುವ ಕೃಷಿ ಕೂಲಿಕಾರರು ಭೂರಹಿತ ಬಡಜನರು ಮೊದಲಾದವರನ್ನು ಬಲಿಷ್ಠವಾಗಿ ಸಂಘಟಿಸಿ, ಹೋರಾಡುವುದರ ಮೂಲಕ ನ್ಯಾಯ ದೊರೆಯುವಂತೆ ಮಾಡುವದು ಅತೀ ಪ್ರಾಮುಖ್ಯವಾದುದರಿಂದ, ರೈತರ ಚಳುವಳಿಗೆ ಸಕ್ರಿಯ ಬೆಂಬಲವೀಯುವದರೊಂದಿಗೆ, ಇವರ ಸಂಘಟನೆ ಮತ್ತು ಹೋರಾಟ ಬಲಪಡಿಸಲು ರಾಜ್ಯಸಮಿತಿ ಕರೆಯಿತ್ತಿದೆ.

ಹೋರಾಟಗಳ ಬಗ್ಗೆ :

ಬಹುರಾಷ್ಟ್ರೀಯ ಸಂಸ್ಥೆಗಳ ಹಿಡಿತದಲ್ಲಿರುವ ಐ. ಟಿ. ಸಿ. ಆಡಳಿತವರ್ಗ

(ಕಡೇ ಪುಟ ನೋಡಿ)

ಕಾನೂನುರಹಿತ ಕಾನೂನಿಗೆ ಬೆಳೆಯುತ್ತಿರುವ ವಿರೋಧ

ಶ್ರೀಮತಿ ಗಾಂಧಿಯವರು ಅಧಿಕಾರ ವಹಿಸಿಕೊಂಡಂದಿನಿಂದಲೂ ಜನತೆಯ ನಾಗರಿಕ ಹಕ್ಕುಗಳನ್ನು ರಕ್ಷಿಸುವ ಸಲುವಾಗಿ ಸ್ಥಾಪಿತವಾಗಿರುವ ಸಂಸ್ಥೆಗಳ ಮೇಲೆ ಕ್ರಮಬದ್ಧವಾದ ಆಕ್ರಮಣ ಶುರುವಾಗಿದೆ. ಸರ್ಕಾರದ ಅನೇಕ ಕ್ರಮಗಳ ಮೂಲಕ ಪತ್ರಿಕೆಗಳ ಮತ್ತು ನ್ಯಾಯಾಂಗದ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವುದು ಆರಂಭವಾಗಿದೆ. ಆಳುವ ಪಕ್ಷದ ಜವಾಬ್ದಾರಿ ಸದಸ್ಯರು ಈಬಗ್ಗೆ ಬೆದರಿಕೆ ಹಾಕುವ ಮಾತುಗಳನ್ನೂ ಆಡುತ್ತಿದ್ದಾರೆ.

ಸೆಪ್ಟೆಂಬರ್ 22ರಂದು ರಾಷ್ಟ್ರೀಯ ಭದ್ರತಾ ಕಾಯಿದೆಯನ್ನು ತರಲಾಗಿದೆ. ಇದು ನಾಗರಿಕ ಹಕ್ಕುಗಳ ದಮನದ ಆರಂಭ. ಬೆಂಗಳೂರಿನ ಕಾಂಗ್ರೆಸ್ ಗೂಂಡಾಗಳು ಪತ್ರಿಕೆಗಳ ಮೇಲೆ ಹೇಯವಾದ ಆಕ್ರಮಣ ಮಾಡಿದ್ದಾರೆ. ಇದನ್ನು ರಾಜ್ಯದ ಮುಖ್ಯಮಂತ್ರಿಗಳೇ ಪ್ರಚೋದಿಸಿದ್ದಾರೆ. ಮಹಾರಾಷ್ಟ್ರದ ಮುಖ್ಯಮಂತ್ರಿ, "ಸಂವಿಧಾನವನ್ನು ವಿವರಿಸುವ ಹಕ್ಕು ನ್ಯಾಯಾಂಗಕ್ಕೆ ಇಲ್ಲ" ಎಂದು ಹೇಳಿದ್ದಾರೆ.

ಶ್ರೀಮತಿ ಗಾಂಧಿ ಮತ್ತು ಅವರ ವಿಧೇಯರು ರಾಷ್ಟ್ರೀಯ ಭದ್ರತಾ ಕಾಯಿದೆಯನ್ನು ಸಮರ್ಥಿಸಿಕೊಳ್ಳುವುದರಲ್ಲಿ ನಿರತರಾಗಿದ್ದಾರೆ. ಆದರೆ ದೇಶದ ಇಡೀ ಪ್ರಜಾಪ್ರಭುತ್ವವಾದಿ ಅಭಿಪ್ರಾಯ ಅದನ್ನು ಖಂಡಿಸಿದೆ.

ಆರು ಪಕ್ಷಗಳ ಒಕ್ಕೂಟ ಮತ್ತು ಅದರಾಚೆಗಿನ ಇತರ ವಿರೋಧ ಪಕ್ಷಗಳು ಕಾಯಿದೆಯನ್ನು ವಿರೋಧಿಸಿ ದೇಶದಾದ್ಯಂತ ಚಳುವಳಿ ಹೂಡುತ್ತಿವೆ. ಟ್ರೇಡ್ ಯೂನಿಯನ್ ಚಳುವಳಿಗಳು ಕಾಯಿದೆಗೆ ಅಸಮ್ಮತಿ ಸೂಚಿಸಿವೆ. ಅನೇಕ ವಿದ್ಯಾರ್ಥಿ ಸಂಘಟನೆಗಳೂ ಅದನ್ನು ವಿರೋಧಿಸಿವೆ.

ಶ್ರೀಮತಿ ಗಾಂಧಿಯವರ ಮುಖವಾಣಿಯಾದ ನ್ಯಾಷನಲ್ ಹೆರಾಲ್ಡ್ ಬಿಟ್ಟರೆ, ಮಿಕ್ಕೆಲ್ಲಾ ರಾಷ್ಟ್ರೀಯ ಪತ್ರಿಕೆಗಳೂ ಅಧಿಕಾರಶಾಹಿಗೆ ಇಂಥ ಕಾಯಿದೆಯ ಸಾಧನವನ್ನು ಕೈಗೆ ಕೊಡುವುದರ ಅಪಾಯನ್ನು ಕುರಿತು ಎಚ್ಚರಿಸಿವೆ. ಈ ಕಾಯಿದೆಯು "...ಹೊಸ, ಕಠಿಣತರ ಆಡಳಿತದ ಆರಂಭವಾಗಬಹುದು" ಎಂದು ಸೆಪ್ಟೆಂಬರ್ 24ರ ಹಿಂದೂ ಪತ್ರಿಕೆ ಎಚ್ಚರಿಸಿದೆ. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯು ಇದನ್ನು ತುರ್ತುಸ್ಥಿತಿಯ ಮೀಸಾಗೆ ಹೋಲಿಸಿದೆ. "ತುರ್ತುಪರಿಸ್ಥಿತಿಯಿಂದ ಸಂಪೂರ್ಣ ಪಾಠ ಕಲಿತಿಲ್ಲ ಎನ್ನುವುದು ಸ್ಪಷ್ಟವಾಗಿದೆ" ಎಂದು ಸ್ಟೇಟ್ಸ್‌ಮನ್ ಪತ್ರಿಕೆ ಬರೆದಿದೆ. ಸರ್ಕಾರದ ಆಡಳಿತ ಅಸಾಮರ್ಥ್ಯ ಗೊತ್ತಾಗುತ್ತದೆ ಎಂದು ಬಾಲಬಡುಕ ಟೈಮ್ಸ್ ಆಫ್ ಇಂಡಿಯಾ ಕೂಡ ಬರೆದಿದೆ,

ರಾಷ್ಟ್ರೀಯ ಭದ್ರತಾ ಕಾಯಿದೆಯ ಜೊತೆಗೆ, ಸರ್ಕಾರದ ಭರವಸೆಗಳನ್ನು ಅಲ್ಲಗಳೆಯುವ ಇನ್ನೂ ಅನೇಕ ಕ್ರಮಗಳು ಜಾರಿಗೆ ಬಂದಿವೆ ಅಪರಾಧ ಶಿಕ್ಷೆ ಕಾಯಿದೆಯ ತಿದ್ದುಪಡಿ ಇಂಥದರಲ್ಲಿ ಒಂದು, ಕೆಳ ಅಧಿಕಾರಿಗಳೇ ಕೆಲವು ಬಾರಿ ತೀರ್ಪು ನೀಡುವ ಅಧಿಕಾರವನ್ನು ಇದು ಕೊಡುತ್ತದೆ. ಪತ್ರಿಕೆಯನ್ನು ಶಿಕ್ಷಿಸಲು ಈಗ ಕಾರ್ಯಕಾರಿ ಮ್ಯಾಜಿಸ್ಟ್ರೇಟರಿಗೆ ಅಧಿಕಾರ ಕೊಡಲಾಗಿದೆ. ದೆಹಲಿಯ ಅನೇಕ ಪತ್ರಿಕೆಗಳಿಗೆ ಜಗಮೋಹನ್-ಭಿಂದರ್ ತಂಡ ಷೋಕಾಸ್ ನೋಟೀಸ್ ಕೊಟ್ಟಿದೆ.

ಭದ್ರತಾ ಕಾಯಿದೆಯ ಸಲಹಾ ಸಮಿತಿಗೆ ಈಗ ಹೈಕೋರ್ಟಿನ ನ್ಯಾಯಾಧೀಶರೂ ಸದಸ್ಯರಾಗಬಹುದು. ಹೈಕೋರ್ಟಿನಲ್ಲಿ ಹತ್ತು ವರ್ಷ ವಕೀಲರಾಗಿರುವ ಯಾರೇ ಆಗಲಿ ಈಗ ನ್ಯಾಯಾಧೀಶರಾಗಬಹುದು. ಇದರಿಂದ ಸಲಹಾ ಸಮಿತಿಯ ತುಂಬ ಹೌದಪ್ಪಗಳನ್ನೇ ತುಂಬಲು ಅವಕಾಶವಾದಿದೆ.

1961ರ ವಕೀಲರ ಕಾಯಿದೆಗೆ ತಿದ್ದುಪಡಿ ತರಲೂ ಸರ್ಕಾರ ಯೋಚಿಸುತ್ತಿದೆ. ಇದರ ಪ್ರಕಾರ ವಕೀಲರು ಈಗ ಕಾರ್ಮಿಕ, ಕೃಷಿ, ಇತರ ಮಂಡಲಿಗಳು, ವಿಶೇಷ ಕೋರ್ಟುಗಳ ಮುಂದೆ ಹಾಜರಾಗುವಂತೆ ಇಲ್ಲ, ಇದರಿಂದ ಪ್ರಜೆಗಳಿಗೆ ನ್ಯಾಯ ಸಹಾಯ ದೊರಕದಂತೆ ಆಗಿ ನಾಗರಿಕ ಹಕ್ಕುಗಳು ದಮನವಾಗಲಿವೆ

(ಕಡೇ ಪುಟ ನೋಡಿ)

ಕಿಮ್ ದ್ವಾ ಜುಂಗ್ ಅವರಿಗೆ ವಿಧಿಸಿದ ಮರಣದಂಡನೆಯನ್ನು ಖಂಡಿಸಿರಿ

ಕಿಮ್ ದ್ವಾ ಜುಂಗ್ ಅವರಿಗೆ ಮರಣ ದಂಡನೆ ವಿಧಿಸಲಾಗಿದೆ. ಈ ಅಮಾನುಷ ಶಿಕ್ಷೆ ವಿಧಿಸಲು ದಕ್ಷಿಣ ಕೋರಿಯಾದ ಮಿಲಿಟರಿ ಟ್ರಿಬ್ಯೂನಲ್‌ಗೆ ಕೇವಲ ಆರು ಮಿನಿಟುಗಳು ಸಾಕಾದವು ಚೌದುಹ್ವಾನ್‌ನ ಫ್ಯಾಸಿಸ್ಟ್ ಮಿಲಿಟರಿ ಆಡಳಿತದ ಮುಖವಾಣಿಯಾದ ಸರಕಾರಿ ವಕೀಲ ಈ ಶಿಕ್ಷೆ ವಿಧಿಸಬೇಕೆಂದೇ ಕೇಳಿದ್ದ. ಮೇಲಿನ ಮಿಲಿಟರಿ ಕೋರ್ಟು ಈ ಶಿಕ್ಷೆಯನ್ನು ಖಾಯಂಗೊಳಿಸಿದೆ. ಇನ್ನು ಮುಂದೆ ಈ ಮೊಕದ್ದಮೆ ಉಚ್ಚ ನ್ಯಾಯಾಲಯಕ್ಕೆ ಹೋಗುತ್ತದೆ. ಆಮೇಲೆ ಅಂತಿಮವಾಗಿ ಚೌ ದುಹ್ವಾನ್‌ಗೆ ಹೋಗುತ್ತದೆ. ಕಿಮ್ ಜತೆಗೆ ೨೩ ಮಂದಿ ಇತರರಿಗೂ ೨ವರ್ಷಗಳಿಂದ ೨೦ವರ್ಷಗಳವರೆಗಿನ ಜೈಲು ಶಿಕ್ಷೆ ವಿಧಿಸಲಾಗಿದೆ.

ಕಿಮ್ ದ್ವಾಜುಂಗ್ ದಕ್ಷಿಣ ಕೋರಿಯಾದ ಪ್ರಮುಖ ಪ್ರಜಾಪ್ರಭುತ್ವವಾದಿ ವ್ಯಕ್ತಿ, ಅವರು ಹಿಂದಿನ ಸರ್ವಾಧಿಕಾರಿ ಪಾರ್ಕ್ ಜುಂಗ್ ಹಿಯ ವಿರುದ್ಧ 1971ರಲ್ಲಿ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಪಾರ್ಕ್ ಈ ಚುನಾವಣೆಯಲ್ಲಿ ಮೋಸ ನಡೆಸಿದ್ದು ಮಾತ್ರವಲ್ಲ ಕಿಮ್‌ಗೆ ಪರಿಪರಿಯ ಕಿರುಕುಳ ಕೊಟ್ಟರು. ಕಿಮ್ ತಪ್ಪಿಸಿಕೊಂಡು ಜಪಾನಿಗೆ ಹೋದಾಗ 1973ರ ಆಗಸ್ಟ್‌ನಲ್ಲಿ ಟೋಕಿಯೋದಲ್ಲಿ ಹಾಡುಹಗಲೇ ಪಾರ್ಕ್ ಸರ್ವಾಧಿಕಾರಿ ಆಡಳಿತ ಅವರನ್ನು ಅಪಹರಿಸಿ ಸಿಯೋಲ್‌ಗೆ ತಂದಿತು. ಜಪಾನ್ ಮತ್ತು ಇತರೆಡೆ ವ್ಯಕ್ತಪಟ್ಟ ಪ್ರತಿಭಟನೆಯ ಕಾರಣದಿಂದಾಗಿ ಕಿಮ್‌ಗೆ ಏನೂ ತೊಂದರೆ ಮಾಡುವುದಿಲ್ಲವೆಂದು ಪಾರ್ಕ್ ಸರ್ವಾಧಿಕಾರಿ ಆಡಳಿತ ಭರವಸೆ ಕೊಟ್ಟಿತು.

ಕಿಮ್ ಅವರನ್ನು ಕಳೆದ ಮೇ ತಿಂಗಳಲ್ಲಿ ಬಂಧಿಸಲಾಯಿತು. ಇದು ಕ್ವಾಂಜು ದಂಗೆ ನಡೆಯುವ ಮೊದಲೇ ಆಗಿತ್ತು. ಆದರೂ ಕಿಮ್ ಮೇಲಿನ ಒಂದು ಅಪಾದನೆಯೆಂದರೆ 'ಕ್ವಾಂಜು ದಂಗೆಗೆ ಸಂಚು ಹೂಡಿದ್ದು.' ಅವರ ವಿರುದ್ಧ ಬೇರೆ ಅಪಾದನೆಗಳೆಂದರೆ ಅವರು 'ಕಮ್ಯುನಿಸ್ಟ್ ವಿರೋಧಿ ಕಾನೂನು' 'ರಾಷ್ಟ್ರೀಯ ಭದ್ರತಾ ಕಾನೂನು' ಮತ್ತು 'ಲಷ್ಕರಿ ಕಾನೂನಿನ ಆಜ್ಞೆ'ಗಳನ್ನು ಮುರಿದರೆಂಬುದು. ಅವರಿಗೆ ಮರಣದಂಡನೆ ವಿಧಿಸಬೇಕೆಂದು ಕೇಳಲು ಸಾಕಾಗುವಷ್ಟು ಅಪಾದನೆಗಳನ್ನ ಆಡಳಿತ ಅವರ ಮೇಲೆ ಹೊರಿಸಿತ್ತು.

ಕಿಮ್ ಮಾಡಿದ ಒಂದೇ ಒಂದು ತಪ್ಪೆಂದರೆ ದಕ್ಷಿಣ ಕೋರಿಯಾದಲ್ಲಿ ವಿಕಶ್ರಕಾರವಾಗಿ, ಸತತವಾಗಿ ಪ್ರಜಾಪ್ರಭುತ್ವವನ್ನು ಮತ್ತೆ ಸ್ಥಾಪಿಸಲು ಹೋರಾಡುತ್ತಿದ್ದುದು, ಚಾದುಹ್ವಾನ್‌ಗೂ ತನಗಿಂತ ಮೊದಲಿದ್ದ ಪಾರ್ಕ್ ಜುಂಗ ಹಿಯುಃ ತ ಪ್ರಜಾಪ್ರಭುತ್ವದಿಂದ ಏನು ಪ್ರಯೋಜನವಿಲ್ಲ, ಕ್ವಾಂಜುನಲ್ಲಿ ಪ್ರಜಾಪ್ರಭುತ್ವವನ್ನು ಕೇಳಿದ ಸಾವಿರಾರು ವಿದ್ಯಾರ್ಥಿಗಳನ್ನು ಹಾಗೂ ಇತರರನ್ನು ಸಾಮೂಹಿಕವಾಗಿ ಹತ್ಯೆ ಮಾಡಿದವನು ಈತನೇ. ಎಲ್ಲಾ ರಾಜಕೀಯ ಭಿನ್ನಮತೀಯರನ್ನು ಮುರಿಸಿ ತನ್ನ ಅಧಿಕಾರವನ್ನು ಸುರಕ್ಷಿತಗೊಳಿಸುವ ಕೆಟ್ಟ ಅಭಿಲಾಷೆಗಳನ್ನು ಈಡೇರಿಸಲು ಕ್ರಮಬದ್ಧವಾದ ರಾಜಕೀಯ ದಮನ ನಡೆಸುವ ಆತನ ಫ್ಯಾಸಿಸ್ಟ್ ಸಂಚಿನ ಎರಡನೇ ಹಂತವೇ ಕಿಮ್‌ರ ವಿಚಾರಣೆ ಹಾಗೂ ಅವರಿಗೆ ವಿಧಿಸಿದ ರಾಕ್ಷಸೀ ಶಿಕ್ಷೆ. ಇದು ಕ್ವಾಂಜುನ ಸಾಮೂಹಿಕ ಹತ್ಯೆಯ ಮುಂದುವರಿಕೆಯೇ ಆಗಿದೆ.

ಮಿಲಿಟರಿ ನ್ಯಾಯಾಲಯದ ಎದುರು ಹಾಜರುಪಡಿಸುವ ಮೊದಲು ಕಿಮ್ ಹಾಗೂ ಅವರ ಜೊತೆಗೆ ವಿಚಾರಣೆಗೊಳಪಟ್ಟ ಇತರರನ್ನು ಎರಡು ತಿಂಗಳಿಗೂ ಹೆಚ್ಚು ಸಮಯ ಜೈಲಿನಲ್ಲಿಟ್ಟು ಅವರ ಮೇಲೆ ಒತ್ತಡ ತರಲಾಯಿತು, ಹಿಂಸೆಗೊಳಪಡಿಸಿ 'ತಪ್ಪೊಪ್ಪಿಗೆ' ಎನ್ನಲಾದ ದಾಖಲೆಗಳಿಗೆ ಸಹಿಯನ್ನು ಪಡೆಯಲಾಯಿತು.

ಈ ವಿಚಾರಣೆಯನ್ನು ವರದಿ ಮಾಡುವುದರ ಮೇಲೆ ನಿರ್ಬಂಧ ಹೇರಲಾಯಿತು. ಕಿಮ್ ಹಾಗೂ ಅವರ ಜತೆಗೆ ಅಪಾದನೆಗೊಳಗಾದವರಿಗೆ ನ್ಯಾಯಾಲಯದೆದುರು ತಮ್ಮ ಪಕ್ಷವನ್ನು ಪ್ರತಿಪಾದಿಸಲು ಅವಕಾಶವನ್ನೇ ಕೊಡಲಿಲ್ಲ. ಈ ವಿಚಾರಣೆಯ ಬಗ್ಗೆ ತಿಳಿದು ಬಂದ ವಿಷಯಗಳು ಸಿಯೋಲ್‌ನಲ್ಲಿರುವ ವಿದೇಶಿ ರಾಯಭಾರಿ ಕಚೇರಿಗಳ ಮೂಲದಿಂದ ಮಾತ್ರ.

ಈಗ ತಿಳಿದಿರುವ ಸೆನ್ಸಾರ್‌ಶಿಪ್ ದಾಟಿ ಬಂದ ಸ್ವಲ್ಪ ಸುದ್ದಿಯ ಪ್ರಕಾರ ಕಿಮ್ ನ್ಯಾಯಾಲಯದೆದುರು ತನ್ನ ಅಂತಿಮ ದೀರ್ಘ ಹೇಳಿಕೆಯಲ್ಲಿ ತನ್ನ ಮೇಲೆ ಹೊರಿಸಲಾದ ಅಪಾದನೆಗಳನ್ನು ನಿರಾಕರಿಸಿ ತನ್ನನ್ನು ಒಂದು ನೆಲಮಾಳಿಗೆಯ ಕೋಣೆಯಲ್ಲಿ ಬಂಧಿಸಿಟ್ಟ ಅರವತ್ತು ದಿನಗಳಲ್ಲಿ "ಶಬ್ದಗಳಿಗೆ ಮೀರಿದ ಭಯಂಕರ ಅನುಭವ ಪಡೆದೆ" ಎಂದು ಘೋಷಿಸಿದ್ದಾರೆ. ಹಿಂಸೆಯ ಬೆದರಿಕೆ ಹಾಕಲಾಯಿತು ಮತ್ತು ಮತಿಭ್ರಮಣೆಯಾಗುವವರೆಗೆ ಉಪದ್ರವ ಕೊಡಲಾಯಿತು ಎಂದು ಅವರೆಂದಿದ್ದಾರೆ.

ಚೌದು ಹ್ವಾನ್ ಕೂಟ ಅಧಿಕಾರ ಪೀಠಾಸೆಯಿಂದ ತನ್ನ ಸರ್ವಾಧಿಕಾರಿ ಆಡಳಿತಕ್ಕೆ ಅಡೆ-ತಡೆಯಾಗುವ ಎಲ್ಲಾ ಅಂಶಗಳನ್ನು ನಿರ್ಮೂಲ ಮಾಡುತ್ತಿದೆ, ಲೆಕ್ಕವಿಲ್ಲದಷ್ಟು ರಾಜಕಾರಣಿಗಳನ್ನು ರಾಜಕೀಯ ವಲಯದಿಂದಲೇ ಉಚ್ಚಾಟನೆ ಮಾಡಲಾಗಿದೆ. ಮತ್ತು ಅಸಂಖ್ಯಾತ ಅಧಿಕಾರಿಗಳನ್ನು ಸಾರ್ವಜನಿಕ ಹುದ್ದೆಗಳಿಂದ ಬರ್ಖಾಸ್ತು ಮಾಡಲಾಗಿದೆ. ಕಳೆದ ಎರಡು ತಿಂಗಳ ಹಲವು ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಪತ್ರಿಕೋದ್ಯೋಗಿಗಳನ್ನು ವಿದ್ಯಾಲಯದಿಂದ ಉಚ್ಚಾಟನೆ ಮಾಡಲಾಗಿದೆ ಅಥವಾ ಅವರ ಕೆಲಸಗಳಿಂದ ವಜಾ ಮಾಡಲಾಗಿದೆ.

1971ರಲ್ಲಿ ಅಧ್ಯಕ್ಷೀಯ ಚುನಾವಣೆಯಲ್ಲಿ ಪಾರ್ಕ್ ಜುಂಗ್ ಹೀಯ ಅತಿ ಸಮೀಪದ ಪ್ರತಿಸ್ಪರ್ಧಿಯಾದ ಕಿಮ್ ಅವರು ಪಾರ್ಕ್ ಕೊಲೆಯ ನಂತರ ಮುಂದಿನ ವರ್ಷ ನಡೆಯಲಿದೆಯೆಂದು ಹೇಳಿರುವ ಅಧ್ಯಕ್ಷೀಯ ಚುನಾವಣೆಯಲ್ಲಿ ಪ್ರಮುಖ ಅಭ್ಯರ್ಥಿಗಳಲ್ಲಿ ಒಬ್ಬರು ಎಂದು ವ್ಯಾಪಕವಾಗಿ ಅಭಿಪ್ರಾಯ ಮಾಡಲಾಗಿತ್ತು. ಆದ್ದರಿಂದ ಫ್ಯಾಸಿಸ್ಟ್ ಕೂಟಕ್ಕೆ ಕಿಮ್‌ರ ಬಾಯಿಯನ್ನು ಶಾಶ್ವತವಾಗಿ ಮುಚ್ಚಿಸುವುದು ಅತೀ ಅಗತ್ಯವಾಗಿದೆ. ಈಗ ಕಿಮ್‌ಗೆ ಮರಣದಂಡನೆಯಾಗಿದೆ ಅಧ್ಯಕ್ಷೀಯ ಚುನಾವಣೆ ನಡೆಯುವುದಿಲ್ಲ; ಚೌದು ಹ್ವಾನ್ ತನ್ನನ್ನೇ ಅಧ್ಯಕ್ಷನೆಂದು ಘೋಷಿಸಿಕೊಂಡಿದ್ದಾನೆ. ನಾವು ಕಿಮ್ ದ್ವಾಜುಂಗ್‌ಗೆ ವಿಧಿಸಿದ ಮರಣದಂಡನೆಯನ್ನು ಹಾಗೂ ಅವರನ್ನು ಕೊಲೆಮಾಡಲು ಫ್ಯಾಸಿಸ್ಟ್ ಮಿಲಿಟರಿ ಸರ್ವಾಧಿಕಾರ ಹೂಡಿರುವ ಸಂಚನ್ನು ಬಲವಾಗಿ ಖಂಡಿಸುತ್ತೇವೆ. ಜಗತ್ತಿನ ಪ್ರತಿಯೊಂದು ಕಡೆಯಿಂದಲೂ ಕಿಮ್‌ರನ್ನು ಅವರ ಜೊತೆಗೆ ಶಿಕ್ಷೆಗೊಳಗಾದ ಇತರರನ್ನು ಬಿಡುಗಡೆಮಾಡಬೇಕೆಂದು ಕೇಳಿರುವ ಪ್ರಜಾಸತ್ತಾತ್ಮಕ ಶಕ್ತಿಗಳೊಂದಿಗೆ ನಾವು ದನಿಗೂಡಿಸುತ್ತೇವೆ ದ.ಕೊ ಯುವ ಜನರು, ವಿದ್ಯಾರ್ಥಿಗಳು, ಪತ್ರಿಕೋದ್ಯೋಗಿಗಳು, ಲೇಖಕರು, ಕಲಾದರು ದಕ್ಷಿಣ ಕೊರಿಯಾದಲ್ಲಿ ಅಮಾನುಷ ಅಕ್ರಮವಾಗಿ ಬಂಧಿಸಲ್ಪಟ್ಟು ಜೈಲಿನಲ್ಲಿರುವ ಸಾವಿರಾರು ಪ್ರಜಾಪ್ರಭುತ್ವವಾದಿಗಳನ್ನು ಬಿಡುಗಡೆಗೊಳಿಸಬೇಕೆಂದು ಕೇಳುತ್ತೇವೆ ಅವರಾಷ ದಮನಕಾರಿ ಸರ್ವಾಧಿಕಾರದ ವಿರುದ್ಧ ಪ್ರಜಾಪ್ರಭುತ್ವ ಹಾಗೂ ಪ್ರಜಾಸತ್ತಾತ್ಮಕ ಹಕ್ಕುಗಳ ಪುನರ್‌ಸ್ಥಾಪನೆಗಾಗಿ ನಡೆಸುತ್ತಿರುವ ದಕ್ಷಿಣ ಕೋರಿಯಾದ ಜನರ ಹೋರಾಟಗಳಿಗೆ ಎಲ್ಲಾ ರೀತಿಯ ಬೆಂಬಲ ವ್ಯಕ್ತಪಡಿಸುತ್ತೇವೆ.

ದಕ್ಷಿಣ ಕೋರಿಯಾದಲ್ಲಿ ಒಂದಾದ ಮೇಲೆ ಒಂದರಂತೆ ಅಧಿಕಾರಕ್ಕೆ ಬಂದ ಫ್ಯಾಸಿಸ್ಟ್ ಕೂಟಗಳನ್ನು ಅಧಿಕಾರದಲ್ಲೇ ಉಳಿಸುವಲ್ಲಿ ಪಾತ್ರವಹಿಸಿದ ಅಮೇರಿಕೆಯ ಸಾಮ್ರಾಜ್ಯಶಾಹಿಗಳನ್ನು ಖಂಡಿಸುತ್ತೇವೆ. ಹಾಗೂ ಚೌದು ಹ್ವಾನ್‌ನ ಕೂಟಕ್ಕೆ ಆಶ್ರಯ ಕೊಟ್ಟು ಜನರ ರಕ್ತ ಹರಿಸುವಲ್ಲಿ ಪ್ರೋತ್ಸಾಹ ಕೊಡುವುದನ್ನು ನಿಲ್ಲಿಸಬೇಕೆಂದು ಮತ್ತು ಕೊರಿಯಾದ ಪುನರೈಕ್ಯವನ್ನು ತಪ್ಪಿಸಲು, ಈಗಿರುವ ವಿಭಜನೆಯನ್ನೇ ಖಾಯಂಗೊಳಿಸಲು ಅಮೇರಿಕೆಯ ಸಾಮ್ರಾಜ್ಯಶಾಹಿಗಳು ನಡೆಸುವ ತಮ್ಮ ಚಟುವಟಿಕೆಗಳನ್ನು ನಿಲ್ಲಿಸಬೇಕೆಂದು ನಾವು ಕೇಳುತ್ತೇವೆ.

●

ರೈತರ ಹೋರಾಟ

ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ ರೈತಸಂಘದ ಕರೆಯ ಮೇರೆಗೆ ನೂರಾರು ರೈತರು 29-9-80 ರಂದು ಮತಪ್ರದರ್ಶನ ನಡೆಸಿದರು. ತಾಲ್ಲೂಕಿನ ಎಲ್ಲಾ ಹಳ್ಳಿಗಳ ದನಕರುಗಳಿಗೆ ಉಚಿತ ಮೇವನ್ನು ಒದಗಿಸಬೇಕು, ರೈತರ ಸಾಲ ಮತ್ತು ಜಪ್ತಿ ನೋಟೀಸುಗಳನ್ನು ರದ್ದು ಮಾಡಬೇಕು, ರೈತರ ಎಲ್ಲಾ ಕಂದಾಯಗಳನ್ನು ರದ್ದುಮಾಡಬೇಕು, ನ್ಯಾಯಬೆಲೆ ಅಂಗಡಿಗಳ ಮೂಲಕ ಅಕ್ಕಿ, ರಾಗಿ, ಜೋಳ, ಸಕ್ಕರೆ, ಬಟ್ಟೆ ಒದಗಿಸಬೇಕು ಇತ್ಯಾದಿ ಬೇಡಿಕೆಗಳನ್ನು ಈಡೇರಿಸಲು ರೈತರು ಸರ್ಕಾರವನ್ನು ಒತ್ತಾಯಿಸಿದರು. ಪ್ರದರ್ಶನದಲ್ಲಿ ಸಿ.ಪಿ.ಐ (ಎಂ), ರೈತಸಂಘ, ಕಾಂಗ್ರೆಸ್ (ಯು), ಎಸ್.ಎಫ್.ಐ. ಇವುಗಳ ಕಾರ್ಯಕರ್ತರು ಭಾಗವಹಿಸಿದ್ದರು.

ನಂತರ ನಡೆದ ಸಭೆಯಲ್ಲಿ ಕಾಂ. ಎಚ್. ಸಿ. ಚನ್ನಪ್ಪ, ಕಾಂ. ಆರ್. ಎಸ್. ಚನ್ನಬಸವಣ್ಣ, ಕಾಂ ಬಿ ಡಿ. ರಾಮಯ್ಯ, ಎಂ ಆರ್. ಕೆಂಪೇಗೌಡ, ಚತ್ರಪತಿ, ನಾಗರಾಜ್ ಮುಂತಾದವರು ಭಾಷಣ ಮಾಡಿದರು. ಮೊದಲು ದಯಾನಂದ ಅವರು ಸ್ವಾಗತಿಸಿದರು. ಕೊನೆಯಲ್ಲಿ ಟಿ. ಎಸ್, ಶಂಕರಪ್ಪ ವಂದಿಸಿದರು.

●

ಕುದುರೆಮುಖದಲ್ಲಿ ಎಚ್.ಎಸ್.ಸಿ.ಎಲ್.ನ ೨೩೯ ಕಾರ್ಮಿಕರ ರಿಟ್ರೆಂಚಮೆಂಟ ಖಂಡನೆ

ಕುದುರೆಮುಖದಲ್ಲಿ ಎಚ್. ಎಸ್. ಸಿ ಎಲ್. ಆಡಳಿತ ಮಂಡಳಿಯ ತನ್ನ ಸಿಬ್ಬಂಧಿಯಲ್ಲಿ 239 ಕಾರ್ಮಿಕ ನೌಕರರನ್ನು ಯಾವ ಮುಂಸೂಚನೆಯೂ ಇಲ್ಲದೆ 24-9-80 ರಂದು ಹಠಾತ್ತನೆ ರಿಟ್ರೆಂಚ್ ಮಾಡಿದೆ ಎಚ್. ಎಸ್. ಸಿ ಎಲ್. ಕಾರ್ಮಿಕರು ಆಡಳಿತ ವರ್ಗದ ಅನ್ಯಾಯವನ್ನು ಪ್ರತಿಭಟಿಸಿ ಕುದುರೆಮುಖದಲ್ಲಿರುವ ಎಚ್. ಎಸ್. ಸಿ ಎಲ್. ಆಫೀಸಿನ ಮುಂದೆ 24-9-80 ರಿಂದ ಧರಣಿ ಮುಷ್ಕರ ನಡೆಸುತ್ತಿದ್ದಾರೆ. ರಿಟ್ರೆಂಚ್ ಆದ ಕಾರ್ಮಿಕರನ್ನು ಕಾಯಂ ನೌಕರರೆಂದು ಪರಿಗಣಿಸಿ ಅವರನ್ನು ಉತ್ತರ ಕನ್ನಡ ಜಿಲ್ಲೆಯ ಕಾಳೀನದಿ ಯೋಜನೆಯ ಸೂಪಾದಲ್ಲಿ ಎಚ್. ಎಸ್. ಸಿ. ಎಲ್. ಘಟಕಗಳಿಗೆ ವರ್ಗಾಯಿಸಬೇಕೆಂದೂ ಇಲ್ಲವೇ ಕುದುರೆಮುಖ ಕಂಪೆನಿಯಲ್ಲೆ ಕೆಲಸಕ್ಕೆ ತಗೆದುಕೊಳ್ಳಬೇಕೆಂಬ ಮನವಿಯೂ ನಿರರ್ಥಕವಾಗಿದೆ.

ಸಿ. ಐ ಟಿ. ಯು. ಕರ್ನಾಟಕ ರಾಜ್ಯಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ ಸಿ. ನಂಜುಂಡಪ್ಪನವರು 18-10-80 ರಂದು ಪತ್ರಿಕಾ ಹೇಳಿಕೆಯೊಂದನ್ನು ಹೊರಡಿಸಿ ಎಚ್. ಎಸ್. ಸಿ. ಎಲ್. ಕಾರ್ಮಿಕರ ಹೋರಾಟಕ್ಕೆ ತಮ್ಮ ಸಂಪೂರ್ಣ ಬೆಂಬಲಿ ವ್ಯಕ್ತಪಡಿಸಿದ್ದಾರೆ ಎಚ್. ಎಸ್. ಸಿ. ಎಲ್. ಕಂಪೆನಿ ಸರಕಾರದ ಒಡೆತನದಲ್ಲಿರುವ ಕಂಪೆನಿಯಾಗಿದ್ದು ತನ್ನ ಕೆಲಸವನ್ನು ಖಾಸಗಿ ಕಂಟ್ರಾಕ್ಟರುಗಳಿಗೆ ಕೊಟ್ಟು ಕಾಯಂ ನೌಕರರನ್ನು ರಿಟ್ರೆಂಚ್ ಮಾಡಿರುವ ಆಡಳಿತ ವರ್ಗದ ಅಮಾನುಷ ಕ್ರಮವನ್ನು ಉಗ್ರವಾಗಿ ಖಂಡಿಸಿದ್ದಾರೆ.

●

ಕೆ. ಆರ್. ಶ್ರೀಯಾನ್ ಅವಿರೋಧ ಆಯ್ಕೆ

ದ. ಕ. ಜಿಲ್ಲೆಯ ಕಾಪೂರಿನ ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷರಾಗಿ ಕಾಂ. ಕೆ ಆರ್. ಶ್ರೀಯಾನ್ ಅವರು ಅವಿರೋಧವಾಗಿ ಪುನರಾಯ್ಕೆ ಆಗಿದ್ದಾರೆ. 5-10-80 ರಂದು ಚುನಾಯಿತ ಡೈರೆಕ್ಟರರ ಸಭೆ ನಡೆದಿತ್ತು, ಕಾಪೂರು ಸೊಸೈಟಿ ಜಿಲ್ಲೆಯಲ್ಲೇ ಉತ್ತಮ ಮಟ್ಟದ ಸೊಸೈಟಿಗಳಲ್ಲಿ ಒಂದು

○

ನಕ್ಸಲ್‌ವಾದದ ಬಿಕ್ಕಟ್ಟು

—ಇ. ಎಂ. ಎಸ್.

ತಮ್ಮನ್ನು ತಾವೇ "ಕ್ರಾಂತಿಕಾರಿ ಕಮ್ಯುನಿಸ್ಟ"ರೆಂದು ಹೇಳಿಕೊಳ್ಳುವವರು ಅಥವಾ ಬಳಕೆಯಲ್ಲಿರುವ ಶಬ್ದ ಉಪಯೋಗಿಸುವುದಾದರೆ "ನಕ್ಸಲೀಯರು" ಎಂದು ಕರೆಸಿಕೊಳ್ಳುವವರು ಈಗ ಧೋರಣೆ ಹಾಗೂ ಸಂಘಟನೆಗೆ ಸಂಬಂಧಪಟ್ಟಂತೆ ಒಂದು ಗಂಭೀರ ಬಿಕ್ಕಟ್ಟಿನಲ್ಲಿದ್ದಾರೆ. "ಬಿಹಾರ, ಪಶ್ಚಿಮಬಂಗಾಳ ಹಾಗೂ ಆಂಧ್ರಪ್ರದೇಶದಲ್ಲಿ ಕೆಲವು ಭಿನ್ನಮತೀಯರು ತಾತ್ಕಾಲಿಕ ಕೇಂದ್ರ ಸಮಿತಿಯ ಮುಖ್ಯಸ್ಥರಾದ ಸಿ. ಪಿ. ರೆಡ್ಡಿಯವರ ರಾಜಕೀಯ ಧೋರಣೆಯ ವಿರುದ್ಧ ಬಂಡೆದ್ದಿದ್ದಾರೆ" ಎಂದು ವರದಿಯಾಗಿದೆ (ಹಿಂದೂಸ್ತಾನ್ ಟೈಮ್ಸ್, ಅಕ್ಟೋಬರ್ 3).

ಆ ವರದಿಗಾರ ಮುಂದುವರಿದು "ಸದ್ಯ ಆಂಧ್ರಪ್ರದೇಶದಲ್ಲಿ ಸಮಾವೇಶಗೊಂಡಿರುವ ತಾತ್ಕಾಲಿಕ ಕೇಂದ್ರ ಸಮಿತಿಯ ಅಖಿಲಭಾರತ ಸಮ್ಮೇಳನವನ್ನು ಕೆಲವು 'ಬಂಡುಗಾರ'ರು ಬಹಿಷ್ಕರಿಸಿದ್ದಾರೆಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಬೇರೊಂದು 'ರಾಜಕೀಯ ವ್ಯವಸ್ಥೆ'ಯ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳಲು ಅವರು ಈ ತಿಂಗಳ ಕೊನೆಯಲ್ಲಿ ಪ್ರತ್ಯೇಕವಾಗಿ ಸಭೆ ಸೇರುತ್ತಾರೆ. ಕಳೆದ ತಿಂಗಳು ಶ್ರೀರಾಮಧರ್ ಸಿಂಗ್ ಮತ್ತು ಶ್ರೀ ಗುರುಭಕ್ಷಸಿಂಗ್ ರ ಸಂಯುಕ್ತ ನೇತೃತ್ವದಲ್ಲಿ ಸಿ. ಪಿ. ಐ. (ಎಂ. ಎಲ್.)ನ ಬಿಹಾರ ಪ್ರಾಂತೀಯ ಸಂಘಟನಾ ಸಮಿತಿಯು ಶ್ರೀ ರೆಡ್ಡಿಯವರ ರಾಜಕೀಯ ಧೋರಣೆಯಿಂದ ಸಂಬಂಧ ಕಡಿದುಕೊಳ್ಳಬೇಕೆಂದು ತನ್ನ ಸದಸ್ಯರಿಗೆ ಕರೆ ನೀಡುವ ನಿರ್ಣಯ ಕೈಗೊಂಡಾಗ ಶ್ರೀ ರೆಡ್ಡಿಯ ವಿರುದ್ಧ ಬಂಡಾಯ ಬೆಳಕಿಗೆ ಬಂತು. ಸುಮಾರಾಗಿ ಇದೇ ಸಮಯದಲ್ಲಿ ಶ್ರೀ ವಿಷ್ಣು ಮಂಡಲ್ ಮತ್ತು ಪ್ರಸೂನ ಗೋಸ್ವಾಮಿಯ ನೇತೃತ್ವದ ಪಶ್ಚಿಮ ಬಂಗಾಳ ಘಟಕ ಪಾರ್ಟಿಗೆ ಶ್ರೀ ರೆಡ್ಡಿಯ ನಾಯಕತ್ವವನ್ನು ನಿರಾಕರಿಸುವ ಇದೇ ರೀತಿಯ ಒಂದು ನಿರ್ಣಯ ಕೈಗೊಂಡಿತು" ಎಂದು ಹೇಳಿದ್ದಾರೆ.

ಚೀನಿ ಕಮ್ಯುನಿಸ್ಟ್ ಪಕ್ಷದ ನೀತಿಯ ನಿರಾಕರಣೆ :

ಈ ಮಧ್ಯೆ 'ಪೇಟ್ರಿಯಟ್' ಪತ್ರಿಕೆಯ ವರದಿಗಾರ ಸಪ್ಟಂಬರ್ 1ರಂದು ತ್ರಿಶೂರ್‌ನಿಂದ ಹೀಗೆ ವರದಿಮಾಡಿದ್ದಾರೆ –"ಇಲ್ಲಿಗೆ ಸಮೀಪವಿರುವ ಅಂತಿಕಾಡುವಿನಲ್ಲಿ ಭದ್ರಕಾವಲಿನಲ್ಲಿ ನಡೆಯುತ್ತಿರುವ ರಾಜ್ಯಮಟ್ಟದ ಗುಪ್ತ ಸಭೆಯಲ್ಲಿ ಒಂದು ಪ್ರಮುಖ ನಕ್ಸಲೀಯ ಗುಂಪು ತಾನು ಒಂದು ದಶಕಕ್ಕೂ ಹೆಚ್ಚು ಕಾಲ ವಿಮರ್ಶೆಗೊಳಪಡಿಸದೇ ಎತ್ತಿ ಹಿಡಿದ ಚೀನೀ ಕಮ್ಯುನಿಸ್ಟ್ ಪಕ್ಷದ ಸಾಮಾನ್ಯ ಧೋರಣೆಗೆ ಇನ್ನು ಮುಂದೆ ತಾನು ಬದ್ಧವಲ್ಲ ಎಂದು ಘೋಷಿಸಿದೆಯೆಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ.

"ಮೂರುದಿನಗಳ ಗುಪ್ತ ಸಮಾಲೋಚನೆಗಳ ನಂತರ ಚೀನೀ ಪ್ರಭುತ್ವವೂ ಸೋವಿಯತ್ ಪ್ರಭುತ್ವದಂತೆ ಮಾರ್ಕ್ಸ್‌ವಾದ - ಲೆನಿನ್‌ವಾದದಿಂದ ದೂರ ಸರಿದಿದೆಯೆಂದು ತೀರ್ಮಾನಿಸಲಾಯಿತು" ಅಲ್ಲದೆ ತ್ರಿಶೂರ್ ಸಮ್ಮೇಳನದಲ್ಲಿ "ಪಾರ್ಲಿಮೆಂಟೇತರ ವಿಧಾನಗಳ ಮೂಲಕ ಪ್ರಭುತ್ವವನ್ನು ವಶಪಡಿಸಿಕೊಳ್ಳುವುದರಲ್ಲಿ ನಂಬಿಕೆಯಿರುವ ವಿವಿಧ ಶಾಖಾ ಮಾರ್ಕ್ಸ್‌ವಾದೀ-ಲೆನಿನ್‌ವಾದೀ ಗುಂಪುಗಳ ಐಕ್ಯತೆ" ತಮ್ಮ ಗುರಿಯೆಂದು ಘೋಷಿಸಲಾಗಿದೆಯೆಂದೂ ವರದಿಯಾಗಿದೆ, ಈ ಸಮ್ಮೇಳನದ ಪ್ರಕಾರ 27 ನಕ್ಸಲೀಯ ಗುಂಪುಗಳಲ್ಲಿ 16 ಮಾತ್ರ ಮೂಲಭೂತವಾಗಿ ಪಾರ್ಲಿಮೆಂಟೇತರ ದಾರಿಯಲ್ಲಿ ನಂಬಿಕೆಯುಳ್ಳವು. ಉಳಿದವೆಲ್ಲಾ ಪರಿಷ್ಕರಣವಾದಿಗಳು (revisionists)".

ಸಂಪೂರ್ಣ ವಿಘಟನೆ :

ಮೇಲೆ ಹೇಳಿದ ಎರಡು ಪತ್ರಿಕಾ ವರದಿಗಳು ಸರಿಯಾಗಿದ್ದಲ್ಲಿ, ನಕ್ಸಲೀಯರು ಬೇರೆ ಯಾವುದೇ ರಾಜಕೀಯ ಪಕ್ಷ ಅಥವಾ ಗುಂಪಿಗಿಂತ ಹೆಚ್ಚು ಗಂಭೀರವಾದ ಬಿಕ್ಕಟ್ಟಿನಲ್ಲಿದ್ದಾರೆ. ಬೂರ್ಜ್ವಾ-ಭೂಮಾಲೀಕರ ಪ್ರಭುತ್ವ ಸರಕಾರ, ವಿರೋಧಪಕ್ಷಗಳು ಮತ್ತು ಅಂತರ್ರಾಷ್ಟ್ರೀಯ ಹಾಗೂ ರಾಷ್ಟ್ರೀಯ ಪರಿಷ್ಕರಣವಾದದ ವಿರುದ್ಧ ಹೋರಾಟದಲ್ಲಿ ಜನರನ್ನು ಒಂದುಗೂಡಿಸುತ್ತೇವೆಯೆನ್ನುವವರು ತಮ್ಮನ್ನೇ ಒಂದುಗೂಡಿಸಲು ಅಸಮರ್ಥರಾಗಿದ್ದಾರೆ! 1967-68 ರಲ್ಲಿ ಪಶ್ಚಿಮ ಬಂಗಾಳದ ನಕ್ಸಲ್‌ಬಾರೀ ಕ್ಷೇತ್ರದಿಂದ ಹೊರಹೊಮ್ಮಿತು ಎನ್ನಲಾದ ಮತ್ತು ಉತ್ತರ ಭಾರತದ ತೆರಾಯಿ ಕ್ಷೇತ್ರ, ಆಂಧ್ರಪ್ರದೇಶದ ಶ್ರೀಕಾಕುಳಂ, ಕೇರಳ, ತಮಿಳುನಾಡಿಗೆ 'ಕಾಡ್ಗಿಚ್ಚಿನಂತೆ ಹಬ್ಬಿದ ಕ್ರಾಂತಿಕಾರಿ ಚಳವಳಿ' 27 ಬಡಿದಾಡುವ ಗುಂಪುಗಳಾಗಿ ವಿಘಟಿತವಾದಂತೆ ಕಾಣುತ್ತದೆ. ಇದು ಬೇರೆ ಯಾವುದೇ ರಾಜಕೀಯ ಪಕ್ಷ ಅಥವಾ ಗುಂಪು ಮುರಿಯಲಾರದ ದಾಖಲೆ!

ಇದರಲ್ಲಿ ಆಶ್ಚರ್ಯವಿಲ್ಲ-ಯಾಕೆಂದರೆ ಯಾವ ಸೈದ್ಧಾಂತಿಕ-ರಾಜಕೀಯ ಮಣ್ಣಿನಲ್ಲಿ ನಕ್ಸಲ್‌ವಾದದ ಬೀಜಗಳನ್ನು ಬಿತ್ತಿದ್ದರೋ ಅದೇ ಸಂಪೂರ್ಣವಾಗಿ ಕೊಚ್ಚಿಕೊಂಡು ಹೋಗಿದೆ. ಚೀನದ ಕಮ್ಯುನಿಸ್ಟ್ ನಾಯಕತ್ವ ಸಾಂಸ್ಕೃತಿಕ ಕ್ರಾಂತಿಯ ಸಮಯದಲ್ಲಿ ಅಂಗೀಕರಿಸಿದ ಎಡ-ಪಂಥವಾದಿ ದುಸ್ಸಾಹಸವಾದಿ ನಿಲುವು ತಮ್ಮ ಅತಿ-ಕ್ರಾಂತಿಕಾರಿ ಪಕ್ಷವನ್ನು ಸ್ಥಾಪಿಸಲು ಮೂಲ ಪ್ರೇರಣೆಯೆಂಬುದನ್ನು ನಕ್ಸಲ್‌ವಾದದ ನಾಯಕರು, ಕಾರ್ಯಕರ್ತರು, ಪ್ರಚಾರಕರು ಮುಚ್ಚಿಡುವುದಿಲ್ಲ. ಆದರೆ, ಅವರ ಚೀನೀ ಗುರುಗಳೇ ಈಗ ತಮ್ಮ ನಾಯಕತ್ವ ಈ ಮೊದಲು ಅನುಸರಿಸಿದ ದಾರಿಯಿಂದ ಹಿಂದೆ ಸರಿಯಲಾರಂಭಿಸಿದ್ದಾರೆ.

ಚೀನಾ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಹಾಗೂ ರಾಷ್ಟ್ರೀಯ ಜನತಾ ಸಮ್ಮೇಳನ (National People,s Congress)ದ ಇತ್ತೀಚಿನ ನಿರ್ಣಯಗಳಲ್ಲಿ ಮಾವೋ ಚೆ ಡೊಂಗ್‌ರವರೂ ಸೇರಿದಂತೆ ಸಂಪೂರ್ಣ ನಾಯಕತ್ವ ಮಾಡಿದ ತಪ್ಪುಗಳನ್ನು ಬಹಿರಂಗ ಪಡಿಸಲಾಗಿದೆ, ಇದಾದ ನಂತರ ಎರಡು-ಮೂರು ತಿಂಗಳಲ್ಲಿ ಪಕ್ಷದ ಸಮ್ಮೇಳನ ನಡೆಯಲಿದೆ ಅಂದರೆ ಭಾರತದ ನಕ್ಸಲೀಯರು ಮತ್ತು ಇದೇ ತರ ಜಗತ್ತಿನಾದ್ಯಂತ ಎಡ-ದುಸ್ಸಾಹಸೀ ಗುಂಪುಗಳಿಗೆ ಮೂಲ ಪ್ರೇರಣೆಯಾದ ಸೈದ್ಧಾಂತಿಕ-ರಾಜಕೀಯ ಮಾರ್ಗವನ್ನು ಚೀನಾದ ಪಕ್ಷವೇ ಈಗ ಒಪ್ಪುತ್ತಿಲ್ಲ.

ಸಂಪೂರ್ಣ ಮಾರ್ಗವೇ ತಪ್ಪಾಗಿತ್ತು :

ನಕ್ಸಲೀಯರ ನಾಯಕರಲ್ಲಿ ಕ್ರಾಂತಿಕಾರೀ ಪ್ರಾಮಾಣಿಕತೆಯಿದ್ದರೆ ಅವರೀಗ 1967-68ರಲ್ಲಿ (ಸಿ ಪಿ ಐ. (ಎಂ) ನಿಂದ ಬೇರೆಯಾಗಿ, ಅದನ್ನು "ಚೀನಾದ ಅಧ್ಯಕ್ಷ ನಮ್ಮ ಅಧ್ಯಕ್ಷ" ಎಂದು ವಿಚಿತ್ರವಾಗಿ ಸಮರ್ಥಿಸಿಕೊಂಡದ್ದು, ಆದರೆ ಅದೇ ಚೀನೀ ಪಕ್ಷ ಇಡೀ ತನ್ನ ಮಾರ್ಗವೇ ತಪ್ಪು ಎಂದು ಸಾರ್ವಜನಿಕವಾಗಿ ಒಪ್ಪಿಕೊಂಡದ್ದು ಇವೆಲ್ಲ ಬೆಳವಣಿಗೆಗಳ ಬಗ್ಗೆ ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ಚೀನೀ ಕಮ್ಯುನಿಸ್ಟ್ ಪಕ್ಷ ಈ ರೀತಿ ತನ್ನ ಧೋರಣೆಗಳ ಬಗ್ಗೆ ಸಾರ್ವಜನಿಕವಾಗಿ ಆತ್ಮವಿಮರ್ಶೆ ನಡೆಸುವ ಮೊದಲು ಚೌ ಎನ್‌ಲೈಯವರು, ನಕ್ಸಲೀಯ ನಾಯಕರಿಗೆ ಅವರು ಚೀನೀ ಮಾರ್ಗವನ್ನು ತಪ್ಪಾಗಿ ತಿಳಿದುಕೊಂಡು ತಪ್ಪಾಗಿ ಅರ್ಥೈಸುತ್ತಿದ್ದಾರೆ ಎಂದು ಖಾಸಗಿಯಾಗಿ ಹೇಳಿದ್ದರೆಂಬುದನ್ನು ಈ ಸಂದರ್ಭದಲ್ಲಿ ನೆನೆಸಿಕೊಳ್ಳಬಹುದು. ಆಗಲೇ ಅವರು ತಾವು ಹಿಡಿದ ಮಾರ್ಗದ ಬಗ್ಗೆ ಆತ್ಮವಿಮರ್ಶೆ ನಡೆಸಿ ಅದನ್ನು ಸರಿಪಡಿಸುವ ಕೆಲಸ ಆರಂಭಿಸಬೇಕಿತ್ತು. ಕನಿಷ್ಟ ಈಗಲಾದರೂ ಅಂದರೆ ಚೀನೀ ಪಕ್ಷವೇ ಆತ್ಮವಿಮರ್ಶೆ ಹಾಗೂ ಸರಿಪಡಿಸುವಿಕೆಯ ಪ್ರಕ್ರಿಯೆಯನ್ನು ಪ್ರಾರಂಭಿಸಿರುವಾಗಲಾದರೂ ನಕ್ಸಲೀಯರು ತಮ್ಮ ಆತ್ಮವಿಮರ್ಶೆ ಮಾಡಿಕೊಳ್ಳುತ್ತಾರೂ ?

ಆತ್ಮವಿಮರ್ಶೆಯ ಪ್ರಯತ್ನ ನಡೆಯುತ್ತಿಲ್ಲ :

ಅವರಲ್ಲಿ ಅಣುವಿನಷ್ಟಾದರೂ ಕ್ರಾಂತಿಕಾರೀ ಪ್ರಾಮಾಣಿಕತೆಯಿದ್ದರೆ ನಮ್ಮ ದೇಶದ ಈಗಿನ ರಾಜಕೀಯ ವಾಸ್ತವತೆಯೂ ,ಅವರು ತಮ್ಮೊಳಗೆ ದೃಷ್ಟಿಹರಿಸಿ ಸಿ. ಪಿ. ಐ (ಎಂ) ಮುಖ್ಯ ಪಾತ್ರವಹಿಸುತ್ತಿದ್ದ ಎಡ ಮತ್ತು ಪ್ರಜಾಪ್ರಭುತ್ವವಾದೀ ಚಳವಳಿಯಿಂದ ಬೇರೆಯಾದದ್ದು ಸರಿಯೇ ಎಂದು ವಿಮರ್ಶಿಸುವಂತೆ ಮಾಡಬೇಕು. ಏಕೆಂದರೆ ಚೀನೀ ಪಕ್ಷದ ನಾಯಕತ್ವ ಮತ್ತು ನಕ್ಸಲೀಯರಿಂದ 'ಪರಿಷ್ಕರಣವಾದಿಗಳು' ಎಂದೂ ಸಿ ಪಿ ಐ. ಮತ್ತು ಸೋವಿಯತ್ ಯೂನಿಯನ್ ಕಮ್ಯುನಿಸ್ಟ್ ಪಕ್ಷ (ಸಿ. ಪಿ. ಎಸ್. ಯು)ದ ನಾಯಕತ್ವದಿಂದ 'ಪಂಥವಾದಿಗಳು' ಎಂದೂ ಖಂಡಿಸಲ್ಪಟ್ಟ ಸಿ. ಪಿ. ಐ. (ಎಂ) ಎಡ ಹಾಗೂ ಪ್ರಜಾಪ್ರಭುತ್ವವಾದೀ ಶಕ್ತಿಗಳನ್ನು ಒಂದುಗೂಡಿಸಲು ಹೋರಾಡುವ ಹಾಗೂ ಪ್ರಜಾಪ್ರಭುತ್ವದ ಉಳಿವಿಗಾಗಿ ಎಲ್ಲಾ ಸರ್ವಾಧಿಕಾರೀ ವಿರೋಧೀ ಶಕ್ತಿಗಳ ಜತೆಗೆ ಸಂಯುಕ್ತ ಕ್ರಿಯೆ ನಡೆಸುವ ಕಷ್ಟಕರ ಹಾದಿಯಲ್ಲಿ ಮುಂದುವರಿದಿದೆ. ಈ ಪ್ರಯತ್ನಗಳು ನೇಮಿತವಾದ ಯಶಸ್ಸು ಸಾಧಿಸಿದೆ. ಯಾಕೆಂದರೆ ಇದರಿಂದಾಗಿ ತೀವ್ರಗಾಮಿ ಪ್ರಜಾಸತ್ತಾತ್ಮಕ ಶಕ್ತಿಗಳು ಹೆಚ್ಚೆಚ್ಚಾಗಿ ಒಗ್ಗಟ್ಟಾಗುತ್ತಿವೆ ಹಾಗೂ ದುಡಿಯುವ ಜನರ ಸಂಘಟನೆಗಳು ಮತ್ತು ಚಳುವಳಿಗಳು ಒಂದಾಗುತ್ತಿವೆ. ಆದರೆ ಇಂತಹ ಸಮಯದಲ್ಲಿ ನಕ್ಸಲೀಯರು ಎಷ್ಟೊಂದು ತುಂಡುಗಳಾಗಿ ಒಡೆಯುತ್ತಿದ್ದಾರೆಂದರೆ ಒಬ್ಬ ಸಾಮಾನ್ಯ ವ್ಯಕ್ತಿಗೆ ಇಂತಹ ತುಂಡುಗಳ ಸಂಖ್ಯೆಯಾಗಲೀ ಅವರು ಬೇರೆಯಾಗಲು ಅವರಲ್ಲಿರುವ ಭಿನ್ನಾಭಿಪ್ರಾಯಗಳನ್ನು ತಿಳಿಯುವುದಾಗಲೀ ಸಾಧ್ಯವಿಲ್ಲ.

ವಿವಿಧ ನಕ್ಸಲೀಯ ಗುಂಪುಗಳಲ್ಲಿ ಒಂದಾದರೂ ಆತ್ಮವಿಮರ್ಶೆ ಹಾಗೂ ಸರಿಪಡಿಸುವಿಕೆಯ ಬಗ್ಗೆ ಉತ್ಸುಕವಾಗಿಲ್ಲ. ಮಾತ್ರವಲ್ಲ, 'ಪೇಟ್ರಿಯಟ್'ನ ತ್ರಿಶೂರ್‌ವರದಿ ಸರಿಯಾಗಿದ್ದಲ್ಲಿ ಈ 27 ಗುಂಪುಗಳಲ್ಲಿ ಕನಿಷ್ಟ ಒಂದು ಗುಂಪು ತನ್ನ ದಾರಿ ಬಗ್ಗೆ ಎಷ್ಟು ಖಚಿತವಾಗಿದೆಯೆಂದರೆ ಈಗಾಗಲೇ ಅದು ಈಗಿನ ಚೀನಾ ಮತ್ತು ಅಲ್ಲಿಯ ಕಮ್ಯುನಿಸ್ಟ್ ಪಕ್ಷ ಹಾಗೂ ಸೋವಿಯತ್ ಯೂನಿಯನ್ ಮತ್ತು ಅಲ್ಲಿಯ ಕಮ್ಯುನಿಸ್ಟ್ ಪಕ್ಷ ಎರಡನ್ನೂ ಒಂದೇ ಗುಂಪಿಗೆ ಸೇರಿಸಿ ಎರಡೂ ಪರಿಷ್ಕರಣವಾದಿಗಳು ಎಂದು ಹೇಳಿದೆ. ಈ ರೀತಿ ಒಂದು ದಶಕದ ಕಾಲ ತಮ್ಮ ಗುರು ಹಾಗೂ ಆಶ್ರಯದಾತವಾಗಿದ್ದ ಚೀನೀ ಕಮ್ಯುನಿಸ್ಟ್ ಪಕ್ಷವನ್ನು ಸಾರಾಸಗಟು ಖಂಡಿಸಿದ ಮೇಲೆ ತಾವೇ ಸೇರಿಕೊಂಡ "ಮಾರ್ಕ್ಸ್‌ವಾದ-ಲೆನಿನ್‌ವಾದದಲ್ಲಿ ನಂಬಿಕೆ"ಗೆ ಅವರಲ್ಲಿ ಸೈದ್ಧಾಂತಿಕ ಆಧಾರ ಏನಾದರೂ ಉಳಿದಿದೆಯೇ ಎಂದು ಆಶ್ಚರ್ಯವಾಗುತ್ತದೆ.

ದ್ವೇಷದಲ್ಲಿ ಒಗ್ಗಟ್ಟಾಗಿದ್ದಾರೆ :

ಆದರೆ ನಕ್ಸಲ್‌ವಾದ ಮುಂದುವರಿಯುತ್ತಿದೆ. ಹಲವು ಗುಂಪು, ಪಂಗಡಗಳಾಗಿ ವಿಭಜಿತರಾಗಿದ್ದರೂ ಇವರೆಲ್ಲಾ ಸಮಾಜವಾದದ ಜಾಗತಿಕ ವ್ಯವಸ್ಥೆ ಹಾಗೂ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳಲ್ಲಿ ಬೆಳೆಯುತ್ತಿರುವ ಐಕ್ಯತೆಯ ಮೇಲೆ ದ್ವೇಷ ಸಾಧಿಸುವುದರಲ್ಲಿ ಇವರು ಒಂದಾಗಿದ್ದಾರೆ. ಜಗತ್ತಿನ ಶೇಕಡ 40ರಷ್ಟು ಜನಸಂಖ್ಯೆಯನ್ನು ಬಂಡವಾಳಶಾಹಿ ವ್ಯವಸ್ಥೆಯಿಂದ ವಿಮೋಚನೆಗೊಳಿಸಿದ ಸಮಾಜವಾದೀ ವ್ಯವಸ್ಥೆ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳಲ್ಲಿ ಗುತ್ತೇದಾರಿ ವಿರೋಧಿ ಶಕ್ತಿಗಳೊಂದಿಗೆ ಹಾಗೂ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಜನಪ್ರಿಯ ಕ್ರಾಂತಿಕಾರಿ ಶಕ್ತಿಗಳೊಡನೆ ಅದು ಹೊಂದಿರುವ ಸಖ್ಯ-ಜಗತ್ತಿನ ಕ್ರಾಂತಿಕಾರಿ ಚಳುವಳಿಯ ಈ ಅಮೂಲ್ಯ ಸಾಧನೆಗಳ ಬಗ್ಗೆ ಹೆಮ್ಮೆಪಡುವುದು.

ಮಾರ್ಕ್ಸ್‌ವಾದ-ಲೆನಿನ್‌ವಾದ ಹಾಗೂ ಕಾರ್ಮಿಕ ಅಂತರಾಷ್ಟ್ರೀಯತೆಯ ಮೂಲಭೂತ ಸಿದ್ಧಾಂತಗಳನ್ನು ಒಪ್ಪುವವರ ಮುಖ್ಯ ಲಕ್ಷಣ ಎರಡು ಡಜನ್‌ಗಿಂತಲೂ ಹೆಚ್ಚಿರುವ ನಕ್ಸಲೀಯ ಗುಂಪುಗಳಲ್ಲಿ ಒಂದಾದರೂ ಈ ರೀತಿ ಹೆಮ್ಮೆಪಡುವಂತೆ ಕಾಣುವುದಿಲ್ಲ.

ಚೀನಾದ ಕಮ್ಯುನಿಸ್ಟ್ ಪಕ್ಷದ ಸದ್ಯದ ನಾಯಕತ್ವಮಾಡಿಕೊಂಡ ಆತ್ಮವಿಮರ್ಶೆಯ ವಿವರಗಳನ್ನು ಯಾವುದಾದರೂ ನಕ್ಸಲೀಯ ಗುಂಪು ಗಂಭೀರವಾಗಿ ಅಧ್ಯಯನ ಮಾಡಿದೆಯೇ ಎಂದು ಕೇಳಬೇಕಾಗುತ್ತದೆ. ಹಾಗೆ ಮಾಡುತ್ತಿದ್ದಾರೆ ಎಂಬುದರ ಸೂಚನೆಗಳೇನೂ ಇಲ್ಲ. ಇದರರ್ಥ ಅವರು ಅಂತರಾಷ್ಟ್ರೀಯ ಕಮ್ಯುನಿಸ್ಟ್ ಚಳವಳಿಯಿಂದ ಸಂಪೂರ್ಣ ಹೊರಗಾಗಿದ್ದಾರೆ ಎಂದೇ ಆಗುತ್ತದೆ, ಇದುವರೆಗೆ ಎಷ್ಟರಮಟ್ಟಿಗೆ ರಷ್ಯಾ ವಿರೋಧಿಗಳಾಗಿದ್ದರೋ ಅಷ್ಟೇ ತೀವ್ರವಾಗಿ ಅವರು ಚೀನಾ ವಿರೋಧಿಗಳೂ ಆಗುತ್ತಿದ್ದಾರೆ.

ಕಾಂಗ್ರೆಸ್(ಐ)ನ ಬಾಡಿಗೆ ಗೂಂಡಾಗಳು :

ಆಂತರಿಕ ಸ್ಥಿತಿಯನ್ನು ಗಮನಿಸುವಾಗ, ನಕ್ಸಲೀಯರಿಗೆ ಸಿ. ಪಿ. ಐ. (ಎಂ) ಗಿಂತ ದೊಡ್ಡ ಶತ್ರು ಬೇರೆಯಿಲ್ಲ. ನಿಜವಾಗಿ ಪೀಪಲ್ಸ್ ಡೆಮಾಕ್ರಸಿಯಲ್ಲಿ ಬರುವ ವರದಿಗಳಿಂದ ತಿಳಿಯುವಂತೆ, ಆಂಧ್ರಪ್ರದೇಶ, ಕೇರಳಗಳಲ್ಲಿ ಸಿ. ಪಿ. ಐ. (ಎಂ)ನ ನಾಯಕರ ಮೇಲೆ ಹಲ್ಲೆ ಹಾಗೂ ಕೊಲೆಗಳಲ್ಲಿ ಅಲ್ಲಿಯ ನಕ್ಸಲೀಯ ಗುಂಪುಗಳು ಕಾಂಗ್ರೆಸ್ (ಐ) ಜತೆಗೂಡಿವೆ. 'ಪೇಟ್ರಿಯಟ್'ನಲ್ಲಿ ವರದಿಯಾದ ನಕ್ಸಲೀಯರ ಅಂತಿಕಾಡು ಗುಪ್ತ ಸಮ್ಮೇಳನದಲ್ಲಿ ('ವರ್ಗ ಶತ್ರುಗಳ ನಿರ್ನಾಮ' ಎಂಬ ಚಾರು ಮುಜುಂದಾರ್ ಮಾರ್ಗದ ಅಂಗವಾಗಿ) ಒಂದು ಕಾರ್ಯ ಯೋಜನೆಯನ್ನು ಹರಿಸೀಲಿ

(6ನೇ ಪುಟ ನೋಡಿ)

'ಇಸ್ಲಾಮಿಕ್ ಕ್ರಾಂತಿ'ಯ ಸ್ವರೂಪ

ಪ್ರೊಫೆಸರ್ ನೀಕೊ ಕಿಲ್‌ಸ್ಟ್ರಾರವರ ಲೇಖನದ ಸಂಗ್ರಹಾನುವಾದ

ಇತ್ತೀಚಿನ ದಿನಗಳಲ್ಲಿ ಮಧ್ಯ ಏಷ್ಯಾ ಮತ್ತಿತರ ಮುಸ್ಲಿಂ ಬಹುಸಂಖ್ಯಾತ ದೇಶಗಳಲ್ಲಿ ಆಗುತ್ತಿರುವ ತೀವ್ರ ರಾಜಕೀಯ ಬದಲಾವಣೆ, ಚಳುವಳಿ, ಕ್ರಾಂತಿಗಳನ್ನು 'ಇಸ್ಲಾಮಿಕ್ ಕ್ರಾಂತಿ' 'ಇಸ್ಲಾಮಿನ ಪುನರುತ್ಥಾನ' ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತಿದೆ. ಈ ಬದಲಾವಣೆ, ಚಳುವಳಿ, ಕ್ರಾಂತಿಗಳ ನಿಜವಾದ ಸ್ವರೂಪ ಏನು? ಮತ್ತು ಇವುಗಳಲ್ಲಿ ಇಸ್ಲಾಂ ಧರ್ಮದ ಪಾತ್ರ ಏನು? ಎಂಬ ಪ್ರಶ್ನೆಗಳು ಈ ದೇಶಗಳಲ್ಲಿ ಪ್ರಗತಿಪರ ಬೆಳವಣಿಗೆ ಬಯಸುವವರನ್ನು ಕಾಡುತ್ತಿದೆ.

ಈ ದೇಶಗಳ ರಾಜಕೀಯದಲ್ಲಿ ಇಸ್ಲಾಂ ಒಂದು ಧರ್ಮವಾಗಿ ಹಿಂದೆಂದೂ ಇಲ್ಲದ ರೀತಿಯಲ್ಲಿ, ಬೇರೆ ಯಾವ ದೇಶಗಳಲ್ಲಿ ಕಂಡು ಬರದ ರೀತಿಯಲ್ಲಿ, ಪ್ರಧಾನ ಪಾತ್ರ ವಹಿಸುತ್ತಿದೆ ಎಂಬುದಕ್ಕಂತೂ ಸಂಶಯವಿಲ್ಲ. ಇಷ್ಟೇ ಅಲ್ಲದೆ ಬೇರೆ ಯಾವುದೇ ಧರ್ಮದಲ್ಲಿ ಕಾಣ ಬರದ; ರಾಜಕೀಯವಾಗಿ ತೀವ್ರವಾದ ಧಾರ್ಮಿಕ ಮೂಲಭೂತವಾದದ ಚಳವಳಿಗಳು ಈ ದೇಶಗಳಲ್ಲಿ ಕಾಣಬರುತ್ತವೆ.

ಈ ದೇಶಗಳ ಆರ್ಥಿಕ-ಸಾಮಾಜಿಕ ಚಾರಿತ್ರಿಕ ಹಿನ್ನೆಲೆಯಲ್ಲಿ ಈ ಬೆಳವಣಿಗೆಯನ್ನು ವಿಶ್ಲೇಷಿಸುವುದು ಅಗತ್ಯ. ತೀರಾ ಸಾಮಾನ್ಯೀಕರಿಸಿದ ಅಥವಾ ಸರಳೀಕೃತ ತೀರ್ಮಾನಗಳಿಗೆ ಬರುವುದು ಈ ಬೆಳವಣಿಗೆಗಳ ತಿರುಳನ್ನು ಅರ್ಥಮಾಡಿಕೊಳ್ಳುವುದರಲ್ಲಿ ಸಹಾಯ ಮಾಡಲಾರವು.

ಇಸ್ಲಾಂ ಧಾರ್ಮಿಕ ತತ್ವಗಳನ್ನು ರಾಜಕೀಯದಲ್ಲಿ ಅಳವಡಿಸಿಕೊಳ್ಳುವುದರಲ್ಲಿ ಈ ದೇಶಗಳಲ್ಲಿ ಒಂದೇ ಮಾದರಿ ಕಂಡುಬರುವುದಿಲ್ಲ. ಕೆಲವು ದೇಶಗಳಲ್ಲಿ ಆಳುವ ಪಕ್ಷ ಅಥವಾ ವರ್ಗಗಳೂ 'ಇಸ್ಲಾಂ ರಾಜಕೀಯ ಸುಧಾರಣೆಗಳು' 'ಇಸ್ಲಾಂ ಕ್ರಾಂತಿ'ಗಳ ಬಗ್ಗೆ ಮಾತನಾಡಿದರೆ ಇನ್ನು ಹಲವು ದೇಶಗಳಲ್ಲಿ ಪ್ರಮುಖ ವಿರೋಧಿ ಪಕ್ಷಗಳು ಆಳುವ ಪಕ್ಷದ ವಿರುದ್ಧ ಇಸ್ಲಾಮಿ ಘೋಷಣೆಗಳನ್ನು ಹಾಕುತ್ತವೆ.

ಇಲ್ಲಿ ಇರಾನ್‌ನ 'ಇಸ್ಲಾಮಿಕ್ ಕ್ರಾಂತಿ'ಯ ಸ್ವರೂಪವನ್ನು ವಿವರವಾಗಿ ವಿಶ್ಲೇಷಿಸುವುದು ಸಹಾಯಕ. ಏಕೆಂದರೆ ಇರಾನ್ 'ಇಸ್ಲಾಂ ಕ್ರಾಂತಿ'ಗೆ ಒಳ್ಳೆಯ ಮಾದರಿ ಉದಾಹರಣೆ.

ಇರಾನಿನ 'ಇಸ್ಲಾಮಿಕ್ ಕ್ರಾಂತಿ'ಯ ಹಿನ್ನೆಲೆಯನ್ನು ವಿಶ್ಲೇಷಿಸಬೇಕಾದರೆ ಷಾನ ಆಡಳಿತದಲ್ಲಿ ಇರಾನ್‌ನ ರಾಜಕೀಯ ಪರಿಸ್ಥಿತಿಯನ್ನು ವಿವರವಾಗಿ ಪರಿಶೀಲಿಸಬೇಕಾಗುತ್ತದೆ.

ಷಾನ ರಾಜ್ಯಭಾರ ಶೈಲಿ :

1953ರಲ್ಲಿ ಮೊಸೆದೆಗ್‌ರ 'ಜನಪ್ರಿಯ ರಾಷ್ಟ್ರೀಯ ರಂಗ'ದ ಸರ್ಕಾರವನ್ನು ಸಿ. ಐ. ಎ. ಸಹಾಯದಿಂದ ಕ್ಷಿಪ್ರ ಕ್ರಾಂತಿಯ ಮೂಲಕ ಉರುಳಿಸಿ ಅಧಿಕಾರಕ್ಕೆ ಬಂದ ನಂತರ ಹೆಚ್ಚುಕಡಿಮೆ ಷಾನ ಸರ್ವಾಧಿಕಾರ ಸ್ಥಾಪಿತವಾಯಿತು. 1953ರಿಂದ 1977ರ ವರೆಗಿನ ಷಾನ ಆಡಳಿತದ ಕಾಲದಲ್ಲಿ ಇರಾನಿನಲ್ಲಿ ಆದ ಗಮನಾರ್ಹವಾದ ಬದಲಾವಣೆ ಎಂದರೆ ಹೆಚ್ಚು ಕಡಿಮೆ ಯಾವುದೇ ರೀತಿಯ ರಾಜಕೀಯ ಚಟುವಟಿಕೆ ಸ್ಥಗಿತಗೊಂಡದ್ದು. ಇರಾನ್ ಈ ಕಾಲದಲ್ಲಿ ಹೆಸರಿಗೆ ಮಾತ್ರ ಪ್ರಜಾಪ್ರಭುತ್ವ ದೇಶವಾಗಿದ್ದು, ಅಲ್ಲಿ ಏಕಪಕ್ಷೀಯ ಮಾದರಿಯ ಸರಕಾರವಿತ್ತು, ಕಾನೂನು ಬಾಹಿರವಾಗಿರದ ವಿರೋಧ ಪಕ್ಷಗಳು ಕೇವಲ ಹೆಸರಿಗೆ ಕೆಲವು ಇದ್ದವು. ಅವು ಷಾನ ರಾಜ್ಯಭಾರ ಕೋರಿಕೆ

ಪ್ರಜಾಪ್ರಭುತ್ವ ಎನಿಸಿಕೊಳ್ಳಲು ಮಾತ್ರ ಸಹಾಯಕವಾಗಿದ್ದವು. ನಿಖರವಾಗಿ ಹೇಳುವುದಾದರೆ ಷಾನ ಆಡಳಿತ ಏಕಪಕ್ಷೀಯ ಮಾದರಿಯದೂ ಆಗಿರಲಿಲ್ಲ. ರಾಜಕೀಯ ಧೋರಣೆಗಳ ನಿರ್ಧಾರವಾಗಲಿ, ಅವುಗಳನ್ನು ಜಾರಿಗೆ ತರುವುದಾಗಲಿ ಆಳುವ ಪಕ್ಷದ ಸಂಘಟನೆಯ ಮೂಲಕ ನಡೆಯುತ್ತಿರಲಿಲ್ಲ. ಇವನ್ನೆಲ್ಲಾ ಮಾಡುತ್ತಿದ್ದುದು ಷಾನಿಗೆ ನಿಷ್ಠವಾದ ಒಂದು ಅಸ್ಥಾನಿಕರ ಕೂಟ. ಈ ಕೂಟದ ಸದಸ್ಯರಲ್ಲಿ ಆಳುವ ಪಕ್ಷದಲ್ಲಿ ಚಟುವಟಿಕೆಗಳ ಆಧಾರದ ಮೇಲೆ ಈ ಸ್ಥಾನಕ್ಕೇರಿದವರಲ್ಲ. ಈ ಕೂಟದ ಸದಸ್ಯತ್ವ ಷಾನ ರಕ್ತ ಸಂಬಂಧಿಕರು, ಅವನ ಆಶ್ರಿತರು ಅಲ್ಲದೆ ತಾಂತ್ರಿಕ ತಜ್ಞರಿಗೂ, ಆಡಳಿತ ಸಂಬಂಧ ಅನುಭವವಿರುವವರಿಗೆ ತೆರೆದಿತ್ತು. ಆದರೆ ಈ ಕೂಟದ ಯಾವುದೇ ಸದಸ್ಯ ಸ್ವಂತ ರಾಜಕೀಯ ಬೆಂಬಲ ಹೊಂದಿರುವುದನ್ನು ಷಾ ಸಹಿಸುತ್ತಿರಲಿಲ್ಲ. ಅಂತಹವರನ್ನು ಕೂಡಲೇ ಕೂಟದಿಂದ ಹೊರಗೆ ಹಾಕುವುದಲ್ಲದೆ, ಅವರ ರಾಜಕೀಯ ಅಧಿಕಾರ ಕಿತ್ತುಕೊಳ್ಳುತ್ತಿದ್ದ.

ವಿರೋಧಿ ಶಕ್ತಿಗಳ ಸ್ಥಿತಿ :

1953ರಲ್ಲಿ ಷಾನ ಕ್ಷಿಪ್ರಕ್ರಾಂತಿಯ ನಂತರ ವಿರೋಧ ಪಕ್ಷಗಳ ದಮನ ಆರಂಭವಾಯಿತು. ಇದಕ್ಕಿಂತ ಮೊದಲು ಅಧಿಕಾರದಲ್ಲಿದ್ದ ರಾಷ್ಟ್ರೀಯರಂಗ(National front) ಮತ್ತು ಕಮ್ಯುನಿಸ್ಟ್ ಪಕ್ಷವಾದ ತುದೆ ಪಕ್ಷ ಎರಡೂ ಭೂಗತವಾಗಿ ಸ್ವಲ್ಪ ಕಾಲ ಮುಂದುವರಿದರೂ, 60ರ ದಶಕದಲ್ಲಿ ಒಂದೇ ಸಮನಾದ ದಮನದಿಂದಾಗಿ ಛಿದ್ರವಾದವು.

ರಾಷ್ಟ್ರೀಯ ರಂಗ ಎಡ ಮತ್ತು ಬಲ ರಾಜಕೀಯ ಗುಂಪುಗಳ, ಸಾಮ್ರಾಜ್ಯಶಾಹಿ-ವಿರೋಧಿ ಮತ್ತು ಆಧಾರದ ಮೇಲೆ ಒಂದುಗೂಡಿದ ಒಂದು ರಂಗವಾಗಿತ್ತು. ಈ ರಂಗದಲ್ಲಿ ಆರ್ಥಿಕ, ಸಾಮಾಜಿಕ ಧೋರಣೆಗಳ ಬಗ್ಗೆ ಒಮ್ಮತವಿರಲಿಲ್ಲ. ಆದರೆ 50ರ ದಶಕದ ಷಾನ ದಮನದಿಂದ, 60ರ ದಶಕದ ಆರಂಭದ ಹೊತ್ತಿಗೆ ಸುಮಾರಾಗಿ ಪ್ರಗತಿಪರ ಶಕ್ತಿಗಳು ಇದ್ದ ಭೂಗತ ಪಕ್ಷವಾಗಿತ್ತು. ಆದರೆ ಈ ರೂಪದಲ್ಲೂ ಇದು ಹೆಚ್ಚು ಸಮಯ ಉಳಿಯಲಿಲ್ಲ. 60ರ ದಶಕದಲ್ಲಿ ಈ ರಂಗದ ನಾಯಕರು ಹಲವರು ದೇಶಬಿಟ್ಟು ತೆರಳಿದರೆ, ಇನ್ನು ಕೆಲವರು ಬೆಳೆಯುತ್ತಿದ್ದ ಸರ್ಕಾರಿ ನೌಕರಶಾಹಿ ಹಾಗೂ ಖಾಸಗಿ ಉದ್ಯಮಗಳನ್ನು ಸೇರಿದರು. 1977ರಲ್ಲಿ ಷಾನ ಆಡಳಿತದ ಕೊನೆಯ ಹಂತದಲ್ಲಿ ದಮನ ಸ್ವಲ್ಪ ಮಟ್ಟಿಗೆ ಸಡಿಲಗೊಂಡಾಗ ಇದು ಪುನರ್ರಚಿತವಾದರೂ ಮೊದಲಿನ ಜನಬಲ ಪುನಃ ಪಡೆಯಲು ಸಾಧ್ಯವಾಗಲೇ ಇಲ್ಲ.

ತುದೆ ಪಕ್ಷ ಭೂಗತವಾಗಿ ದಮನದ ಕಾಲವನ್ನು ಸಹಿಸಿದರೂ ಸೋವಿಯೆತ್-ಚೀನಿ ವಿರಸದ ನಂತರ ವಿಭಜಿತವಾಯಿತು. ಪಕ್ಷ ಸೋವಿಯೆತ್-ಪರ ನಿಲುವು ವಹಿಸಿದರೆ, ಹಲವು ಚೀನಿ-ಪರ ಗುಂಪುಗಳು ಪಕ್ಷ ತ್ಯಜಿಸಿ ಹೋದವು. ಇದರಿಂದಾಗಿ ಪಕ್ಷ ಬಹಳಷ್ಟು ಬಲಹೀನವಾಯಿತು. ತುದೆ ಪಕ್ಷ 40-50ರ ದಶಕಗಳಲ್ಲಿ ನಗರದ ಕಾರ್ಮಿಕವರ್ಗದಲ್ಲಿ ಸಾಕಷ್ಟು ಬೆಂಬಲ ಗಳಿಸಿಕೊಂಡಿತು. 60ರ ದಶಕದ ಉತ್ತರಾರ್ಧ ಮತ್ತು 70ರ ದಶಕದಲ್ಲಿ ಹಳ್ಳಿಯಿಂದ ನಗರಗಳಿಗೆ ನಡೆದ ದೊಡ್ಡ ಪ್ರಮಾಣದ ವಲಸೆಯಿಂದ ಕ್ರಾಂತಿಯ ಹೊತ್ತಿಗೆ ಕಾರ್ಮಿಕವರ್ಗದ ಅರ್ಧಕ್ಕಿಂತಲೂ ಹೆಚ್ಚು ಇದೇ ಗುಂಪು ಇದ್ದು ಇವರಲ್ಲಿ ತುದೆ ಪಕ್ಷ ಬೆಂಬಲ ಪಡೆಯಲು ಸಾಧ್ಯವಾಗದೆ ಹೋಯಿತು.

ಕಾರ್ಮಿಕರ ಯೂನಿಯನ್‌ಗಳನ್ನು ಸಂಘಟಿಸುವುದು ದಮನದಿಂದಾಗಿ ಯಾವುದೇ ವಿರೋಧ ಪಕ್ಷಕ್ಕೆ ಅಸಾಧ್ಯವಾಗುವಂತಹ ಸ್ಥಿತಿ ಇತ್ತು. ಆದರೆ ಕಾರ್ಮಿಕ ಯೂನಿಯನ್‌ಗಳು ಇದ್ದವು, ಗುಪ್ತಚಾರ ವಿಭಾಗವಾದ ಸಾವಕ್ (SAVAK) ಅವನ್ನು ಸಂಘಟಿಸಿ, ತನ್ನ ನಿಯಂತ್ರಣದಲ್ಲಿಟ್ಟುಕೊಂಡಿತ್ತು. ಯಾವುದೇ ರೀತಿಯ ಕಾರ್ಮಿಕ ಸಂಘಗಳು ರಾಷ್ಟ್ರೀಯ ಮಟ್ಟದ ಫೆಡರೇಷನ್ ಕಟ್ಟಿಕೊಳ್ಳಲು ಅನುಮತಿ ಇರಲಿಲ್ಲ. ಆದ್ದರಿಂದ ಮುಷ್ಕರಗಳು ಈ ದಮನಕಾರಿ ಪರಿಸ್ಥಿತಿಯಲ್ಲಿ ನಡೆಯುತ್ತಿದ್ದರೂ ಬರಿಯ ಸ್ಥಳೀಯ ಘಟನೆಗಳಾಗಿ ಉಳಿದವು. ಆದ್ದರಿಂದ ಟ್ರೇಡ್ ಯೂನಿಯನ್‌ಗಳು ಸರ್ಕಾರಿ-ವಿರೋಧಿ ಶಕ್ತಿಗಳ ಕೇಂದ್ರವಾಗುವುದು ಸಾಧ್ಯವಾಗದೆ ಹೋಯಿತು.

ಸೇನಾಪಡೆಗಳು ಇರಾನಿನಲ್ಲಿ ಎಂದೂ ಸ್ವತಂತ್ರ ಪಾತ್ರವಹಿಸಿರಲಿಲ್ಲ. ಅಲ್ಲದೆ ಉಗ್ರವಾದ ಭದ್ರತಾ ಕ್ರಮಗಳಿಂದಾಗಿ ಸೇನಾ ಅಧಿಕಾರಿಗಳು, ಸರ್ಕಾರಿ-ವಿರೋಧಿ ಪಿತೂರಿ ನಡೆಸುವುದು ಹೋಗಲಿ, ರಾಜಕೀಯ ಚರ್ಚೆಯಲ್ಲಿ ಭಾಗವಹಿಸುವುದು ಅಸಂಭವವಾಗಿತ್ತು.

ಹೀಗೆ ಎಲ್ಲಾ ವಿರೋಧಿ ಶಕ್ತಿಗಳಿಗೂ, ಪಕ್ಷಗಳಿಗೂ, ಗುಂಪುಗಳಿಗೂ ರಾಷ್ಟ್ರೀಯ ಮಟ್ಟದ ಸಂಘಟನೆ ರಚಿಸುವುದು, ಬೆಳೆಸುವುದು ಎಲ್ಲಕ್ಕಿಂತ ದೊಡ್ಡ ಸಮಸ್ಯೆಯಾಗಿತ್ತು. ರಾಜಕೀಯ ಚರ್ಚೆ ಸಣ್ಣ ಗುಂಪುಗಳಲ್ಲಿ ಮಾತ್ರ ಸಾಧ್ಯವಿತ್ತು.. ಆದರೆ ಇದೇ ಸಂಘಟನೆ ಬೆಳೆಯಲು ಆರಂಭಿಸಿದ ಕೂಡಲೇ ಸಾವಕ್ (SAVAK) ಕಾರ್ಯಕರ್ತರು ಕೂಡಲೇ ಇವುಗಳಲ್ಲಿ ಒಳನುಗ್ಗಿ, ಅವು ಛಿದ್ರವಾಗುವಂತೆ ಅದರ ಮುಖ್ಯ ನಾಯಕರ ಮೇಲೆ ಪ್ರಭಾವ, ಒತ್ತಾಯದಿಂದ ಅವು ಮುಚ್ಚುವಂತೆ ನೋಡಿಕೊಳ್ಳುತ್ತಿದ್ದರು.

ಇಂತಹ ಪರಿಸ್ಥಿತಿಯಲ್ಲಿ ಈ ದಮನಕ್ಕೆ ಒಳಪಡದ ರಾಷ್ಟ್ರವ್ಯಾಪ್ತಿ ಜಾಲ (net work) ಇದ್ದ ಒಂದೇ ಒಂದು ಸಂಘಟನೆ ಎಂದರೆ ಧಾರ್ಮಿಕ ಸಂಘಟನೆ. ಇಸ್ಲಾಂಗೆ ಕ್ರಿಶ್ಚಿಯನ್ ಧರ್ಮಕ್ಕೆ ಇದ್ದ ಹಾಗೆ ಒಂದು ಕೇಂದ್ರೀಯ ಚರ್ಚನಂತಹ ಸಂಘಟನೆ ಇಲ್ಲ. ಆದರೆ ಅದರದ್ದೇ ಆದ ಸಂಘಟನೆ ಇದೆ.

ಶಿಯಾ ಪಂಥದ ವೈಶಿಷ್ಟ್ಯ :

ಇಸ್ಲಾಂನ ಶಿಯಾ ಪಂಥದ ನಂಬಿಕೆಯ ಪ್ರಕಾರ ಇಸ್ಲಾಂ ಸಮುದಾಯವನ್ನು ಆಳುವ ಹಕ್ಕು ಇಮಾಂಗಳಿಗೆ ಮಾತ್ರ ಇದೆ. (ಇಮಾಂ, ಪ್ರವಾದಿ ಮಹಮ್ಮದರ ನೇರ ವಂಶಜರು) ಕೊನೆಯ ಇಮಾಂ 9ನೇ ಶತಮಾನದಲ್ಲಿ ಕಾಣೆಯಾದರು. ಆದರೆ ಇವರು ಇನ್ನೂ ಸತ್ತಿಲ್ಲ, ಜಗತ್ತಿನ ಕೊನೆಗಾಲದಲ್ಲಿ ಆಡಳಿತ ನಡೆಸಲು ಹಿಂದಿರುಗುತ್ತಾರೆ ಎಂದು ಈ ಪಂಥದವರು ನಂಬುತ್ತಾರೆ. ಇಮಾಂ ಇಲ್ಲದಿರುವಾಗ ಅವರ ಪರವಾಗಿ, ಶಿಯಾ ಪಂಥದಲ್ಲಿ ಅತಿ ಹೆಚ್ಚು ಪಾಂಡಿತ್ಯವುಳ್ಳವರ ನೈತಿಕ ನಿರ್ದೇಶನಕ್ಕೆ ಒಳಪಟ್ಟವರು ಮಾತ್ರ ಮುಸ್ಲಿಂ ಸಮುದಾಯವನ್ನು ಆಳಲು ಸಾಧ್ಯ.

ಇರಾನಿನಲ್ಲಿ ಶಿಯಾ ಪಂಥ ಅತಿ ಹೆಚ್ಚು ಪ್ರಚಾರದಲ್ಲಿರುವ ಇಸ್ಲಾಂ ಪಂಥ. ಸುಮಾರು 16ನೇ ಶತಮಾನದಿಂದ ಇದು ಇರಾನಿನ ಅಧಿಕೃತ ಧರ್ಮವಾಗಿದೆ.

ಶಿಯಾಪಂಥ ಅಧಿಕೃತ ಧರ್ಮವಾದಂದಿನಿಂದಲೂ ಧಾರ್ಮಿಕ ಮುಖಂಡರಿಗೂ, ರಾಜ ಮತ್ತು ಅವನ ಅಧಿಕಾರಿಗಳಿಗೂ ಅಧಿಕಾರಕ್ಕಾಗಿ ಸೆಣಸಾಟ ನಡೆಯುತ್ತಲೇ ಬಂದಿದೆ. ಆದರೆ ಪ್ರಭುತ್ವದಿಂದ ನಿಯಂತ್ರಿತವಾದ ಧಾರ್ಮಿಕ ಸಂರಚನೆ ಸ್ಥಾಪಿಸುವುದಾಗಲಿ, ಪ್ರಭುತ್ವವನ್ನು ಸಂಪೂರ್ಣ ಧಾರ್ಮಿಕ ನಿಯಂತ್ರಣಕ್ಕೆ ಒಳಪಡಿಸುವುದಾಗಲಿ ಸಾಧ್ಯವಾಗಿಲ್ಲ. ಆದರೆ ಪ್ರಭುತ್ವ ತನಗೆ ಪರವಾಗಿರುವವರನ್ನು ದೊಡ್ಡ ನಗರದ ಮಸೀದಿಗಳಲ್ಲಿ ಬೋಧಕರಾಗಿ ನೇಮಿಸುತ್ತಿತ್ತು.

ಕೆಲವು 'ಇಸ್ಲಾಂ ಕ್ರಾಂತಿ'ಯ ಉತ್ಸಾಹಿಗಳು ಹೇಳುವಂತೆ ಅಯತುಲ್ಲಾ ಮುಜಹೀದ್ ಮುಂತಾದ ಧಾರ್ಮಿಕ ಮುಖಂಡರು ಯಾವಾಗಲೂ ಆಳುವವರಿಗೆ ಪ್ರಗತಿಪರ ವಿರೋಧಿಗಳಾಗಿದ್ದರು ಎಂಬುದು ಚಾರಿತ್ರಿಕವಾಗಿ ಅಸತ್ಯ. ಹಲವು ಮುಖಂಡರು ಸಾಮಾಜಿಕ, ರಾಜಕೀಯ ಸುಧಾರಣಾ ಚಳುವಳಿಗಳಲ್ಲಿ ಭಾಗವಹಿಸಿದ್ದುಂಟು; ಆದರೆ ಯಥಾಸ್ಥಿತಿಯನ್ನು ಸಮರ್ಥಿಸಿದವರೂ ಉಂಟು. ಆಸ್ಥಾನ ನಿಷ್ಠರಾಗಿದ್ದರೆ ಆಸ್ಥಾನ ಸಲಹೆಗಾರರಾಗಿ ನೇಮಕವಾಗುವ ಸಾಧ್ಯತೆಯೇ ಬಹಳಷ್ಟು ಮಟ್ಟಿಗೆ ಆಸ್ಥಾನ ಮತ್ತು ಧಾರ್ಮಿಕ ಮುಖಂಡರ ಘರ್ಷಣೆಯನ್ನು ಕಡಿಮೆ ಮಾಡಿತ್ತು. ಉಳಿದ ಕೆಲವರು ಹೇಳುವಂತೆ ಶಿಯಾ ಪಂಥ, ಪ್ರಜಾಪ್ರಭುತ್ವಕ್ಕೆ ಬದ್ಧವಾದದ್ದು ಏನಲ್ಲ. ಶಿಯಾಪಂಥದ ಮುಖ್ಯ ತತ್ವ ಎಂದರೆ ರಾಜ್ಯಭಾರ ರಾಜನಿಂದಾಗಲಿ, ಆಯ್ಕೆಯಾದ ಪ್ರತಿನಿಧಿಗಳಿಂದಾಗಲಿ ಧಾರ್ಮಿಕ ಮುಖಂಡರ ನಿರ್ದೇಶನಕ್ಕೆ ಒಳಪಟ್ಟಿರಬೇಕು ಎಂದು.

ಇಪ್ಪತ್ತನೇ ಶತಮಾನದ ಆರಂಭದಿಂದಲೇ ಅಧಿಕಾರಿಗಳ ಸ್ಥಾನಗಳನ್ನು ಭರ್ತಿ ಮಾಡುತ್ತಿದ್ದುದು, ಪಾಶ್ಚಿಮಾತ್ಯ ಶಿಕ್ಷಣ ಪಡೆದ ಬುದ್ಧಿಜೀವಿಗಳು. ಇದರ ಜತೆಗೆ ಆಸ್ಥಾನ ಸಲಹೆಗಾರರಾಗಿ ಧಾರ್ಮಿಕ ಮುಖಂಡರ ಪಾತ್ರ ಕಡಿಮೆಯಾಗುತ್ತಾ ನಡೆದಿತ್ತು. ಅಲ್ಲದೆ ಇರಾನಿನ ಪಾಶ್ಚಿಮಾತ್ಯೀಕರಣದಿಂದ ಜನರ ಮೇಲಿನ ಪ್ರಭಾವ ಕಡಿಮೆಯಾಗುವ ಸಾಧ್ಯತೆ ಇತ್ತು. ಇವೆಲ್ಲಾ ಕಾರಣಗಳಿಂದ ಮುಲ್ಲಾಗಳು ಷಾನ ವಿರುದ್ಧ ಹೆಚ್ಚು ಒಗ್ಗಟ್ಟಾಗುತ್ತಾ ನಡೆದಿದ್ದರು.

ಇರಾನಿನ ಜನಪದ ಸಂಸ್ಕೃತಿ ಎಂದೂ ಧಾರ್ಮಿಕ ಮಡಿವಂತಿಕೆಯದು ಆಗಿರಲಿಲ್ಲ. ಆದಾಗ್ಯೂ, ಅದು ಎಂದೂ ಶಿಯಾ ಇಸ್ಲಾಂನ ಮೂಲ

ಭೂತ ತತ್ವ ಮತ್ತು ಸಂಸ್ಥೆಗಳನ್ನು ಪ್ರಶ್ನಿಸಿರಲಿಲ್ಲ. ತೀವ್ರ ಪಾಶ್ಚಿಮಾತ್ಯೀಕರಣ ಸಹ ಇರಾನಿನ ಸಮಾಜ ಮತ್ತು ಸಂಸ್ಕೃತಿಯನ್ನು ಧರ್ಮನಿರಪೇಕ್ಷಗೊಳಿಸುವುದರಲ್ಲಿ ಹೆಚ್ಚಿನ ಮಟ್ಟಿನ ಯಶಸ್ಸು ಪಡೆದಿರಲಿಲ್ಲ.

ಷಾ ಅಡಳಿತ ವಿರುದ್ಧ ಅತೃಪ್ತಿ :

ಷಾನ ಆಡಳಿತ ಕಾಲದಲ್ಲಿ ಇರಾನ್ ಅಮೇರಿಕಾದ ಹೊಸ ವಸಾಹತುವಿನಂತೆ ಇತ್ತು. ಎಣ್ಣೆಯಿಂದ ಹಿಡಿದು ಎಲ್ಲಾ ಪ್ರಾಕೃತಿಕ ಸಂಪತ್ತು ಹಾಗೂ ಎಲ್ಲಾ ಕೈಗಾರಿಕೆಗಳು ಅಮೇರಿಕನ್ ಕಂಪೆನಿಯ ವಶದಲ್ಲಿದ್ದವು. ಷಾ ಅಮೇರಿಕನ್ ಸರಕಾರದ ಸ್ಥಳೀಯ ಏಜಂಟನಂತೆ ವರ್ತಿಸುತ್ತಿದ್ದ. ಇರಾನಿನ ಸಮಾಜದ ಬೆಳವಣಿಗೆಗೆ ಬೇಕಾದ ಯಾವ ಯೋಜನೆಯನ್ನೂ ಹಾಕಿಕೊಂಡಿರಲಿಲ್ಲ. ಅಮೇರಿಕೆಯ ಕಂಪೆನಿಗಳು ದೇಶವನ್ನು ಕೊಳ್ಳೆ ಹೊಡೆಯುತ್ತಿದ್ದವು.

ಈ ಆರ್ಥಿಕ ಧೋರಣೆ ಷಾ ಮತ್ತು ಅವನ ಆಳುವ ಕೂಟಕ್ಕೆ ಬಿಟ್ಟರೆ ಬೇರೆ ಯಾವ ಸಾಮಾಜಿಕ ಗುಂಪಿಗೂ ಪ್ರಯೋಜನಕಾರಿಯಾಗಿರಲಿಲ್ಲ. ಇದರಿಂದ ಹುಟ್ಟಿದ ಅತೃಪ್ತಿ ದಂಗೆಗೆಡೆಗೊಡದಂತೆ ಎಲ್ಲಾ ಸಾಧ್ಯವಿದ್ದ ವಿರೋಧಿ ಶಕ್ತಿಗಳನ್ನು ದಮನ ಮಾಡಿದ್ದು, ನಿಯಂತ್ರಣದಲ್ಲಿಟ್ಟದ್ದು, ಯಾವುದೇ ರೀತಿಯ ನಾಗರಿಕ ಹಕ್ಕುಗಳು ಇಲ್ಲದಂತೆ ಮಾಡಿದ್ದು; ಇವು ಷಾನ ಆಳುವ ಕೂಟ, ಜನರಿಂದ ಸಂಪೂರ್ಣವಾಗಿ ದೂರವಾಗಿರುವಂತೆ ಮಾಡಿದವು.

ನಾಗರಿಕ ಹಕ್ಕುಗಳ ಅಭಾವ ಮತ್ತು ತಮ್ಮ ದೇಶದ ಬೆಳವಣಿಗೆ ಅಥವಾ ಯಾವುದೇ ಚಟುವಟಿಕೆಯಲ್ಲಿ ಭಾಗವಹಿಸಲು ಅಸಾಧ್ಯವಾಗಿರುವುದು ವಿದ್ಯಾರ್ಥಿಗಳಿಗೆ, ಮಧ್ಯಮ ವರ್ಗದ ಬುದ್ಧಿಜೀವಿಗಳಲ್ಲಿ ಅತೃಪ್ತಿಗೆ ಕಾರಣವಾಗಿತ್ತು. ಹೆಚ್ಚು ಓದಿರದ (ಮ್ಯಾಟ್ರಿಕ್ಯುಲೇಶನ್ ಮುಗಿಸಿದ) ಬ್ಯಾಂಕ್ ಗುಮಾಸ್ತರು ಮುಖ್ಯವಾಗಿ ಸೇರಿರುವ ಕೆಳಮಧ್ಯಮವರ್ಗದಲ್ಲಿ ಮೇಲಿನ ಸಮಸ್ಯೆಗಳಲ್ಲದೆ ಆರ್ಥಿಕವಾಗಿ, ಸಾಮಾಜಿಕವಾಗಿ ಮೇಲೇರುವ ಅವಕಾಶ ಇಲ್ಲದೆ ಇನ್ನೂ ಹೆಚ್ಚಿನ ಅತೃಪ್ತಿ ಹೊಗೆಯಾಡುತ್ತಿತ್ತು. ಈ ವರ್ಗ ವಿಶೇಷವಾಗಿ, ಪಾಶ್ಚಿಮಾತ್ಯೀಕರಣವನ್ನು ಸಂಶಯದಿಂದ ನೋಡುತ್ತಿತ್ತು, ವಿರೋಧಿಸುತ್ತಿತ್ತು. ವ್ಯಾಪಾರಿಗಳಿಗೂ ತಮ್ಮ ರಾಜಕೀಯ ದುರ್ಬಲತೆಯ ತೀವ್ರ ಅರಿವು ಆಗಿತ್ತು. ವಿದೇಶಿ ವ್ಯಾಪಾರಿ, ಬಂಡವಾಳಶಾಹಿ ಮತ್ತು ಇರಾನಿಯನ್ ದೊಡ್ಡ ಬಂಡವಾಳಶಾಹಿ ಗುಂಪು ಎಲ್ಲಾ ಲಾಭವನ್ನು ಪಡೆಯುತ್ತಿದ್ದವು. ವ್ಯಾಪಾರಿಗಳಿಗೆ ತಮ್ಮ ನಿಸ್ಸಹಾಯಕ ಪರಿಸ್ಥಿತಿಯ ಬಗ್ಗೆ ಆಕ್ರೋಶವಿತ್ತು. ಈ ಗುಂಪು ಧಾರ್ಮಿಕ ಸಂಘಟನೆಗೆ ತೀರಾ ಸಮೀಪವಾಗಿತ್ತು. ಕೈಗಾರಿಕಾ ಕಾರ್ಮಿಕರಿಗೆ ಅವರ ಯೂನಿಯನುಗಳನ್ನು ಸಾವಕ್ (SAVAK) ನಿರುಪಯೋಗಿಗೊಳಿಸಿದ್ದು ಮತ್ತು ಮುಷ್ಕರಗಳನ್ನು ದಮನಗೊಳಿಸುತ್ತಿದ್ದುದು ಅತೃಪ್ತಿ ಉಂಟುಮಾಡಿತ್ತು. ಇದಕ್ಕಿಂತಲೂ ದೊಡ್ಡದಾದ ಒಂದು ಅರೆ ಕಾರ್ಮಿಕ ವರ್ಗ (ಇದು ಹಳ್ಳಿಯಿಂದ ನಗರಕ್ಕೆ ದೊಡ್ಡ ಪ್ರಮಾಣದ ವಲಸೆಯ ಫಲ) ಖಾಯಂ ಕೆಲಸ ಗಳಿಸಲಾಗದೆ, ನಗರ ಜೀವನದಲ್ಲಿ ಯಾವುದೇ ರೀತಿಯಲ್ಲಿ ಪಾಲುಗೊಳ್ಳಲು ಸಾಧ್ಯವಾಗದೆ, ಬಹುಶಃ ಅತ್ಯಂತ ಹತಾಶವಾದ ವರ್ಗವಾಗಿತ್ತು. ಷಾನ ಆಡಳಿತದ ಆರಂಭ ಕಾಲದಲ್ಲಿ ಹತಾಶವಾದ ಈ ವರ್ಗದವರನ್ನೇ ಸರ್ಕಾರ ತನ್ನ ರಾಜಕೀಯ ವಿರೋಧಿಗಳ ವಿರುದ್ಧ ಬಳಸುತ್ತಿತ್ತು. ಆದರೆ ಎಲ್ಲಾ ವಿರೋಧಿಗಳ ದಮನ ಸಂಪೂರ್ಣವಾದ ಮೇಲೆ ಸರಕಾರಕ್ಕೆ ಈ ವರ್ಗದ ಉಪಯೋಗವಿರಲಿಲ್ಲ. ಹತೋಟಿ ಸಹ ತಪ್ಪಿತು. ಈ ವರ್ಗದೊಂದಿಗೆ ಧಾರ್ಮಿಕ ಮುಖಂಡರ ಸಂಪರ್ಕ ಪ್ರಭಾವ ಹೆಚ್ಚಿತ್ತು. ಈ ವರ್ಗಕ್ಕೆ ಎಡ ಪಂಥೀಯರಿಗಿಂತ ಧಾರ್ಮಿಕ ಮುಖಂಡರ 'ಭಾಷೆ' ಹೆಚ್ಚು ಅರ್ಥವಾಗುತ್ತಿತ್ತು.

ಹೀಗೆ ಎಲ್ಲಾ ಪ್ರಮುಖ ಸಾಮಾಜಿಕ ಗುಂಪುಗಳಲ್ಲಿ ಅತೃಪ್ತಿ ಹೊಗೆಯಾಡುತ್ತಿದ್ದವು. ಪ್ರತಿಯೊಂದು ಸಾಮಾಜಿಕ ಗುಂಪಿನ ಅತೃಪ್ತಿಯ ಮೂಲ ಬೇರೆಬೇರೆಯಾಗಿದ್ದವು. ಯಾವುದೇ ರೀತಿಯ ವಿರೋಧಿ ರಾಜಕೀಯ ಚಟುವಟಿಕೆ ಸಾಧ್ಯವಿರಲಿಲ್ಲವಾದ್ದರಿಂದ ಇವಕ್ಕೆ ಯಾವುದೇ ಸಾಂಘಿಕ ಅಭಿವ್ಯಕ್ತಿ (Institutionalized outlet) ಇರಲಿಲ್ಲ. ಬಹುಶಃ ಯಾವುದೇ ಇಂತಹ ಅವಕಾಶವಿದ್ದರೆ ಈ ಅತೃಪ್ತಿಗಳು ಕ್ರಾಂತಿಕಾರಿ ಪ್ರಮಾದವು ಎಂದೂ ಆಗುತ್ತಿರಲಿಲ್ಲ.

ಮೇಲೆ ವಿವರಿಸಿದಂತೆ ಷಾ ಎಲ್ಲಾ ವಿರೋಧಿ ಪಕ್ಷ, ಶಕ್ತಿ, ಸಂಘಟನೆಗಳನ್ನು ಪೂರ್ಣವಾಗಿ ನಿರ್ವೀರ್ಯಗೊಳಿಸಿದ್ದ. ಆದರೆ ಇರಾನಿನ ವಿಶಿಷ್ಟ ಪರಿಸ್ಥಿತಿಯಲ್ಲಿ ಧಾರ್ಮಿಕ ಸಂಘಟನೆಯನ್ನು ದಮನ ಮಾಡುವುದಾಗಲಿ, ನಿಯಂತ್ರಣಕ್ಕೊಳಪಡಿಸುವುದಾಗಲಿ ಸಾಧ್ಯವಿರಲಿಲ್ಲ. ಕೆಲವು ಧಾರ್ಮಿಕ ಮುಖಂಡರನ್ನು ವ್ಯಕ್ತಿಗತವಾಗಿ ಅವರ ವಿರೋಧಿ ರಾಜಕೀಯ ಚಟುವಟಿಕೆಗಾಗಿ ಶಿಕ್ಷಿಸಲಿಲ್ಲವೆಂದಲ್ಲ. ಆದರೆ ಬೇರೆ ವಿರೋಧಿ ಶಕ್ತಿಗಳ ಸಂಘಟನೆಗೆ ಮಾಡಿದಂತೆ ಧಾರ್ಮಿಕ ಸಂಘಟನೆಯನ್ನು ದಮನಿಸುವುದು ಸಾಧ್ಯವಿರಲಿಲ್ಲ. ಆದ್ದರಿಂದ ಎಲ್ಲಾ ಅತೃಪ್ತ ವರ್ಗಗಳ ಧಾರ್ಮಿಕ ಮುಖಂಡರ ಸುತ್ತ ಸಂಘಟಿತವಾಗತೊಡಗಿದವು. ಮಸೀದಿಗಳು ರಾಜಕೀಯ ಚರ್ಚೆ ನಡೆಯುವ ಕೇಂದ್ರಗಳಾದವು. ಮಸೀದಿಗಳ ಮೇಲೆ ದಾಳಿ ಮಾಡುವ ಧೈರ್ಯ ಷಾನ ಸರ್ಕಾರಕ್ಕಿರಲಿಲ್ಲ.

70ರ ದಶಕದ ಮಧ್ಯದಲ್ಲಿ ಆರ್ಥಿಕ ಪರಿಸ್ಥಿತಿ ವಿಶೇಷವಾಗಿ ಹದಗೆಟ್ಟಿತ್ತು. ಮೊದಲು ವಿದ್ಯಾರ್ಥಿಗಳ ಪ್ರದರ್ಶನಗಳು ಆರಂಭವಾದವು. ಆಗಾಗ ಕಾರ್ಮಿಕರ ಮುಷ್ಕರಗಳು ನಡೆದುವು. ಇವುಗಳ ಸಂಖ್ಯೆ ಹೆಚ್ಚಾಗುತ್ತಾ ಇದಕ್ಕೆ ಸಾರ್ವತ್ರಿಕ ಸ್ವರೂಪ ಬಂದು, ಹೆಚ್ಚೆಚ್ಚು ಸಾಮಾಜಿಕ ಗುಂಪುಗಳು ಇದರಲ್ಲಿ ಪಾಲುಗೊಂಡವು. ಷಾ ಮತ್ತು ಅಮೇರಿಕನ್ ಸಾಮ್ರಾಜ್ಯಶಾಹಿಯ ವಿರುದ್ಧವಿದ್ದ ಈ ಕ್ರಾಂತಿಯಲ್ಲಿ ಭಾಗವಹಿಸದ ಪ್ರಮುಖ ವರ್ಗವೆಂದರೆ ರೈತರ ವರ್ಗ. ಉಳಿದೆಲ್ಲಾ ವರ್ಗಗಳು ಧಾರ್ಮಿಕ ಮುಖಂಡರ ನಾಯಕತ್ವದಲ್ಲಿ ಇದರಲ್ಲಿ ಭಾಗವಹಿಸಿದವು. ಇದರಲ್ಲಿ ಸಾಕಷ್ಟು ಪ್ರಮಾಣದಲ್ಲಿ ಎಡ ಸಂಘಟನೆಗಳಾದ ಫೆದಾಯಿನ್, ಮುಜಿದಿನ್ ಮತ್ತು ತೂದೆ ಪಕ್ಷಗಳು ಭಾಗವಹಿಸಿದವು. ಆದರೂ ಒಟ್ಟಾರೆ ನಾಯಕತ್ವ ಈಗಾಗಲೇ ವಿವರಿಸಿದ ಕಾರಣಗಳಿಂದಾಗಿ ಧಾರ್ಮಿಕ ಮುಖಂಡರ ಕೈಯಲ್ಲಿತ್ತು.

ಷಾನ ಪತನ ಮತ್ತು ರಾಜಕೀಯ ಅರಾಜಕತೆ :

ಇಂತಹ ಚಳುವಳಿ ದೊಡ್ಡದಾಗಿ ಬೆಳೆಯುತ್ತಾ ಹೋದ ಹಾಗೆ ಅದನ್ನು ಬರಿಯ ದಮನದಿಂದ ನಿಗ್ರಹಿಸುವುದು ಸಾಧ್ಯವಾಗದೆ ಹೋಯಿತು. ಯಾವುದೇ ಮುಖ್ಯ ವರ್ಗದ ಬೆಂಬಲವಿಲ್ಲದ ಷಾ, ಸೈನ್ಯ ಮತ್ತು ಸಾವಕ್‌ಗಳ ದಮನಯಂತ್ರದ ಮೇಲೆ ಪೂರ್ತಿ ಅವಲಂಬಿಸಿದ್ದ. ಇರಾನಿನ ಇಸ್ಲಾಮಿಕ್ ಕ್ರಾಂತಿ ದಮನ ಯಂತ್ರದ ಸಿಬ್ಬಂದಿ ಈ ಯಂತ್ರದ ದುರ್ಬಲ ಅಂಶ ಎಂದು ಇನ್ನೊಮ್ಮೆ ತೋರಿಸಿಕೊಟ್ಟಿದೆ. ಮಿಲಿಟರಿ ನಾಯಕರು ಸಹ ಷಾನ ಮೇಲಿನ ಭರವಸೆ ಬಿಟ್ಟು ತಮ್ಮದೇ ಆದ ಕ್ಷಿಪ್ರಕ್ರಾಂತಿ ಯೋಜಿಸುತ್ತಿದ್ದರು. ಇಂತಹ ಪರಿಸ್ಥಿತಿಯಲ್ಲಿ ಷಾ ದೇಶತ್ಯಾಗ ಮಾಡಿದ.

ಷಾನ ಪತನ ಮತ್ತು ನಿರ್ಗಮನದ ನಂತರ ಸ್ವಲ್ಪ ಸಮಯ ಅರಾಜಕತೆ ವ್ಯಾಪಿಸಿತ್ತು. ಷಾನ ನಿರ್ಗಮನದ ನಂತರ ಕೂಡಲೇ ರಾಷ್ಟ್ರೀಯ ರಂಗದ ನಾಯಕರು ಅಧಿಕಾರ ವಹಿಸಿಕೊಂಡರು. ಆದರೆ ಈ ಸರ್ಕಾರಕ್ಕೆ ನಿಜವಾದ ಅಧಿಕಾರ ಚಲಾಯಿಸಲು ಸಾಧ್ಯವಾಗಲೇ ಇಲ್ಲ. ನಿಜವಾದ ಅಧಿಕಾರ ಹಲವು ಕ್ರಾಂತಿಕಾರಿ ಸೇನೆ (Revolutionary Guard) ಮತ್ತು ಕ್ರಾಂತಿಕಾರಿ ಸಮಿತಿಗಳ ಕೈಯಲ್ಲಿ ಉಳಿಯಿತು. ಇವು ಅಯತುಲ್ಲಾ ಖೋಮೇನಿಯನ್ನು ತಮ್ಮ ನಾಯಕನೆಂದು ಸಾರುತ್ತಿದ್ದವು. ಕೊನೆಗೆ ಪ್ರಧಾನ ಮಂತ್ರಿ ಬಖ್ತಿಯಾರ್‌ರ ಈ ತಾತ್ಕಾಲಿಕ ಸರ್ಕಾರ ಪದತ್ಯಾಗ ಮಾಡಬೇಕಾಯಿತು.

ಆ ನಂತರ ಬಜರ್‌ಗನ್ ಸರ್ಕಾರ ಅಧಿಕಾರಕ್ಕೆ ಬಂತು. ಇದನ್ನು ಪೂರ್ಣವಾಗಿ ಖೋಮೇನಿ ಮತ್ತು ಹಿಂಬಾಲಕರು ಬೆಂಬಲಿಸಲಿಲ್ಲ. ಆದರೂ ಅವನ ಅಧಿಕಾರಕ್ಕೆ ವಿರೋಧ ಸಹ ವ್ಯಕ್ತಪಡಿಸಲಿಲ್ಲ. ಈ ಸಮಯದಲ್ಲಿ ಅಯತುಲ್ಲಾ ಬೆಹೆಸ್ತಿ ಮುಂತಾದ ಧಾರ್ಮಿಕ ನಾಯಕರು ತಮ್ಮ ಬೆಂಬಲಿಗರನ್ನು ಹೆಚ್ಚು ಸಮರ್ಥವಾಗಿ ಸಂಘಟಿಸುವುದರಲ್ಲಿ ನಿರತರಾಗಿದ್ದರು. ಬಜರ್‌ಗನ್ ಸರ್ಕಾರವನ್ನು ಎಡಪಂಥೀಯರು ಸಂಶಯದಿಂದ ನೋಡುತ್ತಿದ್ದರು. ಬಜರ್‌ಗನ್ ಇರಾನಿನ ಕ್ರಾಂತಿಯನ್ನು ಕೆಲವು ಬೂರ್ಜ್ವಾ ರಾಜಕೀಯ ಸುಧಾರಣೆಗಳಿಗೆ ಸೀಮಿತಗೊಳಿಸುವ ಭಯ ಅವರಿಗಿತ್ತು.

ಎಡ ಪಂಥೀಯರ ಮುನ್ನಡೆಗೆ ತಡೆ :

ಆದರೆ ಇದೇ ಸಮಯದಲ್ಲಿ ತೀವ್ರವಾದಿ ಮುಸ್ಲಿಂ ಗುಂಪೊಂದು ಅಮೇರಿಕನ್ ರಾಯಭಾರ ಕಚೇರಿಯನ್ನು ಧಾಳಿಮಾಡಿ ಸಿಬ್ಬಂದಿಯನ್ನು ಒತ್ತೆಯಾಳುಗಳಾಗಿ ತೆಗೆದುಕೊಂಡಿತು. ಷಾನ ವಾಪಸಾತಿ ಮುಖ್ಯ ಶರತ್ತಾಗಿತ್ತು. ಇದನ್ನು ಎಡ ಪಂಥೀಯರೂ ಮತ್ತು ಧಾರ್ಮಿಕ ನಾಯಕರು ಬೆಂಬಲಿಸಿದರು. ಈ ಸಂದರ್ಭದಲ್ಲಿ ಏನೂ ಮಾಡಲು ಸಾಧ್ಯವಾಗದೆ ಬಜರ್‌ಗನ್ ಸರಕಾರ ರಾಜಿನಾಮೆ ನೀಡಿತು. ಸರ್ಕಾರದ ಜವಾಬ್ದಾರಿಯನ್ನು ಧಾರ್ಮಿಕ ಮುಖಂಡರೇ ಹೆಚ್ಚಾಗಿರುವ ಕ್ರಾಂತಿಕಾರಿ ಸಮಿತಿ ನೇರವಾಗಿ ವಹಿಸಿಕೊಂಡಿತು. ಈ ಮಧ್ಯೆ ಅಯತುಲ್ಲಾ ಬೆಹೆಸ್ತಿ ಅಮೇರಿಕನ್ ಒತ್ತೆಯಾಳುಗಳನ್ನಿಟ್ಟುಕೊಂಡ ತೀವ್ರವಾದಿ ಗುಂಪನ್ನು ತಮ್ಮ ಇಸ್ಲಾಮಿಕ್ ರಿಪಬ್ಲಿಕನ್ ಪಾರ್ಟಿ ಕಡೆಗೆ ಗೆದ್ದುಕೊಂಡರು. ಅಮೇರಿಕನ್ ಒತ್ತೆಯಾಳುಗಳ ಸಮಸ್ಯೆ ಪರಿಹಾರ ಹಿಂದೂಡಲು ಖೋಮೇನಿಯ ಅಂಗೀಕಾರ ಪಡೆದರು. ಈ ಮೂಲಕ ಅಮೇರಿಕನ್ ಸಾಮ್ರಾಜ್ಯಶಾಹಿಯ ವಿರುದ್ಧ ಕ್ರಾಂತಿಯನ್ನು ರಕ್ಷಿಸುವ ಪಕ್ಷವಾಗಿ ತನ್ನ ಪಕ್ಷವನ್ನು ಎತ್ತಿಹಿಡಿಯುವುದರಲ್ಲಿ ಸಫಲರಾದರು. ಈ ಬೆಳವಣಿಗೆ, ಇದರ ಭಾವನಾತ್ಮಕ ಪರಿಣಾಮದಿಂದಾಗಿ, ಎಡಪಂಥೀಯರು ಸ್ವತಂತ್ರವಾಗಿ ಸಾಮ್ರಾಜ್ಯಶಾಹಿ ವಿರೋಧ ಮತ್ತು ಆರ್ಥಿಕ ಸಾಮಾಜಿಕೀಕರಣದ ಕಾರ್ಯಕ್ರಮಕ್ಕೆ ಜನ ಬೆಂಬಲಗಳಿಸುವ ಯತ್ನವನ್ನು ವಿಫಲಗೊಳಿಸಿತು.

ಬನಿಸದರ್ ಈ ಮಧ್ಯೆ ಅಧ್ಯಕ್ಷರಾಗಿ ಚುನಾಯಿತರಾದರು. ಆದರೆ ಇಸ್ಲಾಂ ರಿಪಬ್ಲಿಕ್ ಪಕ್ಷ ಪಾರ್ಲಿಮೆಂಟಿನಲ್ಲಿ ಬಹುಮತ ಪಡೆಯಿತು. (ಬನಿಸದರ್ ಈ ಪಕ್ಷಕ್ಕೆ ಸೇರಿದವನಲ್ಲ.)

ಈ ರೀತಿ 'ಇಸ್ಲಾಮಿಕ್ ಕ್ರಾಂತಿ' ವಿಧ್ಯುಕ್ತವಾಗಿ ಅಧಿಕಾರಕ್ಕೆ ಬಂದ ನಂತರ ಎಡಪಂಥೀಯ ಪಕ್ಷ, ಗುಂಪುಗಳ ಮೇಲೆ ದಮನ ಇನ್ನೂ ಜೋರಾಗಿ ಮುಂದುವರಿಯುತ್ತಿದೆ. ನಿಜವಾಗಿ ಹೇಳಬೇಕಾದರೆ ಕ್ರಾಂತಿಯಾದ ಮೇಲೆ ಎಡಪಂಥೀಯ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿಯೇ ಇರಲಿಲ್ಲ. ಈ ಪಕ್ಷಗಳು ಬೆಳೆಯದಂತೆ ತಡೆಯಲು, ಇವು ಇಸ್ಲಾಂ-ವಿರೋಧಿ ಎಂದು ದೂಷಿಸಲಾಗುತ್ತಿದೆ.

ಅಲ್ಪಸಂಖ್ಯಾತ ಬುಡಕಟ್ಟುಗಳ ಸಮಸ್ಯೆ :

ಇಸ್ಲಾಮಿಕ್ ಕ್ರಾಂತಿಕಾರಿ ಸಮಿತಿಯ ಆಡಳಿತದ ಇನ್ನೊಂದು ಪ್ರಮುಖ ವಿರೋಧಿ ಪರ್ಶಿಯನ್ ಅಲ್ಲದೆ ಬೇರೆ ರಾಷ್ಟ್ರೀಯತೆ, ಬುಡಕಟ್ಟಿನ ಜನಸಮುದಾಯ ಮೂಲಭೂತವಾಗಿ ಈ ಸಮಸ್ಯೆ ಷಾನ ಕಾಲದಿಂದ ಮುಂದುವರಿಯುತ್ತಿರುವ ಸಮಸ್ಯೆ. ಷಾನ ಕಾಲದಲ್ಲಿ ಆರ್ಥಿಕ ಬೆಳವಣಿಗೆ ಮುಖ್ಯವಾಗಿ ಕೇಂದ್ರದಲ್ಲಿರುವ ಪರ್ಶಿಯನ್ ಮಾತಾಡುವ ಪ್ರದೇಶದಲ್ಲಿ ಕೇಂದ್ರೀಕೃತವಾಗಿತ್ತು. ಇತರ ಬುಡಕಟ್ಟುಗಳಾದ ಕುರ್ದಿಷ್, ಅರಬ್, ತುರ್ಕೊಮನ್ ಮತ್ತು ಬಲೂಚಿಗಳನ್ನು ಈ ಬೆಳವಣಿಗೆ ಸ್ವಲ್ಪವೂ ತಟ್ಟಲೇ ಇಲ್ಲ. ಷಾನ ವಿಪರೀತ ಕೇಂದ್ರೀಕೃತವಾದ, ಪರ್ಶಿಯನ್ ಭಾಷೆ, ಸಂಸ್ಕೃತಿಯನ್ನು ಮಾತ್ರ ಮಾನ್ಯ ಮಾಡುವ ಆಡಳಿತ, ಈ ಬುಡಕಟ್ಟುಗಳನ್ನು ತೀರಾ ಅತೃಪ್ತಗೊಳಿಸಿದ್ದವು. ಇಸ್ಲಾಮಿಕ್ ಕ್ರಾಂತಿಯ ನಂತರವೂ ಈ ಸಮಸ್ಯೆ ಪರಿಹಾರವಾಗುವ, ಅಂದರೆ ಇವರ ಮುಖ್ಯ ಬೇಡಿಕೆಯಾದ ಸ್ವಾಯತ್ತತೆ ದೊರೆಯುವ, ಲಕ್ಷಣಗಳಿಲ್ಲ. ಆದರ ಬದಲು ಸಮಸ್ಯೆ ಕೆಲವು ಕಾರಣಗಳಿಂದ ಉಲ್ಬಣಗೊಂಡಿದೆ. ಈ ಪ್ರದೇಶಗಳಲ್ಲಿ ಕ್ರಾಂತಿಯ ನಂತರ ಅಧಿಕಾರ ವಹಿಸಿಕೊಂಡ ಅಯತ್ತುಲ್ಲಾಗಳು ಹೆಚ್ಚಿನವರು ಪರ್ಶಿಯನ್ ರಾಷ್ಟ್ರೀಯತೆಗೆ ಸೇರಿದವರು ಮತ್ತು ಸ್ಥಳೀಯರಲ್ಲ. ಅಷ್ಟೇ ಅಲ್ಲದೆ ಅಜರ್‌ಬೈಜನಿನ ತುರ್ಕರನ್ನು ಬಿಟ್ಟರೆ ಉಳಿದ ಎಲ್ಲಾ ಅಲ್ಪಸಂಖ್ಯಾತ ಬುಡಕಟ್ಟುಗಳವರು ಸುನ್ನಿ ಮುಸ್ಲಿಮರು. ಅವರು ಸ್ವಾಭಾವಿಕವಾಗಿಯೇ ಶಿಯಾ ಅಯತ್ತುಲ್ಲಾಗಳ ರಾಜಕೀಯ ನಾಯಕತ್ವವನ್ನು ಒಪ್ಪಿಲ್ಲ. ಅಜರ್‌ಬೈಜಾನಿನ ತುರ್ಕರ ನಾಯಕ ಅಯತ್ತುಲ್ಲಾ ಶರಿಯತ್‌ಮದಾರಿ ಖೋಮೇನಿಯ ಹಳೆಯ ಪ್ರತಿಸ್ಪರ್ಧಿ.

ಕ್ರಾಂತಿಯ ಧಾರ್ಮಿಕ ನಾಯಕರು ಅವರ ಧಾರ್ಮಿಕ ಅಸಹಿಷ್ಣುತೆ, ಮತ್ತು ಪರ್ಶಿಯನ್ ರಾಷ್ಟ್ರೀಯತೆಯಿಂದಾಗಿ, ರಾಜಕೀಯ ವಿಕೇಂದ್ರೀಕರಣ, ವಿವಿಧ ಬುಡಕಟ್ಟುಗಳ ಸಮಾಜ ಮತ್ತು ಪ್ರಾಂತೀಯ ಸ್ವಾಯತ್ತತೆಯನ್ನು ತಿರಸ್ಕರಿಸಿದ್ದಾರೆ. ಅಲ್ಪಸಂಖ್ಯಾತ ಬುಡಕಟ್ಟುಗಳ ಎಲ್ಲಾ ಚಳುವಳಿಗಳನ್ನು ಅತ್ಯಂತ ಕ್ರೂರವಾಗಿ ದಮನಿಸಲಾಗುತಿದೆ.

ವಿವಿಧ ಬುಡಕಟ್ಟುಗಳು ಐಕ್ಯತೆಯಿಂದ ಹೋರಾಡುತ್ತಿಲ್ಲ ಮತ್ತು ಅವುಗಳು ಸರಿಯಾಗಿ ಸಂಘಟಿತವಾಗಿಲ್ಲ. ಆದ್ದರಿಂದ ಇಸ್ಲಾಮಿಕ್ ಕ್ರಾಂತಿಗೆ ಇದರಿಂದ ತಕ್ಷಣವು ಅಪಾಯವಿಲ್ಲ. ಆದರೆ ಈ ಘರ್ಷಣೆಗಳು ಆರ್ಥಿಕ ಪುನಃಶ್ಚೇತನ ಮತ್ತು ಬೆಳವಣಿಗೆಗೆ ಎಡೆಕೊಡದೆ, ಕ್ರಮೇಣ ಆಳುವ ಪಕ್ಷವನ್ನು ಅಭದ್ರಗೊಳಿಸಬಲ್ಲವು.

ಆರ್ಥಿಕ ಧೋರಣೆ :

ಇರಾನನ್ನು ಇಂದು ಆಳುತ್ತಿರುವ ಧಾರ್ಮಿಕ ಮುಖಂಡರಿಗೆ ಮತ್ತು ಅವರ ಬೆಂಬಲಿಗರಿಗೆ ನಿಖರವಾದ ಆರ್ಥಿಕ ಧೋರಣೆಗಳಿಲ್ಲ. ಅಮೇರಿಕನ್ ಒತ್ತೆಯಾಳುಗಳ ಸಮಸ್ಯೆಯಿಂದಾಗಿ ಅಮೇರಿಕಾ, ಜಪಾನು, ಪ.

[7ನೇ ಪುಟ ನೋಡಿ]

ರಾಜ್ಯದಾದ್ಯಂತ ರೈತರಿಗೆ ಬೆಂಬಲ ನೀಡುವ ಸಭೆಗಳು

ಮೂಡಿಗೆರೆ :

ಶಿವಮೊಗ್ಗ ಜಿಲ್ಲೆಯ ರೈತರ ಹೋರಾಟವನ್ನು ಬೆಂಬಲಿಸಿ, ಮೂಡಿಗೆರೆಯ ನಾಗರಿಕ ಸಮಿತಿಯವರು 10-10-80 ರಂದು ಬಹಿರಂಗ ಸಭೆಯನ್ನು ಏರ್ಪಡಿಸಿದ್ದರು. ಸರ್ಕಾರದ ಜನವಿರೋಧಿ ನೀತಿ, ಸಾವಿರಾರು ರೈತರ ಬಂಧನ ಇವುಗಳನ್ನು ಖಂಡಿಸಲಾಯಿತು. ಎ. ಸಿ. ಕೇಶವ ಅವರು ಮಾತನಾಡಿ ರೈತ ಕಾರ್ಮಿಕರು ಸಖ್ಯತೆ ಬೆಳೆಸಿಕೊಂಡು ಹೋರಾಟ ರೂಪಿಸಬೇಕು ಎಂದರು. ಸಭೆಯಲ್ಲಿ ಜಯಪ್ರಕಾಶ್ ನಾರಾಯಣ, ಆರಾಧ್ಯ ಸುಂದರೇಶ್, ಸುಧಾಕರ ಹೆಗ್ಗಡೆ ಮಾತನಾಡಿದರು. ನಂತರ ಮೂಡಿಗೆರೆ ತಾಲ್ಲೂಕಿಗೆ ಸಮೀಪದಲ್ಲಿರುವ ಹೊಸಕೆರೆ ಗ್ರಾಮಕ್ಕೆ ಹಿಂದೆ ಕೆ. ಎಸ್. ಆರ್. ಟಿ. ಸಿ. ಬಸ್ ಓಡಿಸಬೇಕೆಂದು ಒತ್ತಾಯಿಸಿ ಬಸ್‌ನಿಲ್ದಾಣದಲ್ಲಿ ಧರಣಿ ನಡೆಸಲಾಯಿತು. ಕೆ. ಎಸ್. ಆರ್. ಟಿ. ಸಿ. ಮುಖ್ಯಾಧಿಕಾರಿಗಳು ಬಸ್ ಓಡಿಸುವುದಾಗಿ ಆಶ್ವಾಸನೆ ನೀಡಿದ ನಂತರ ಧರಣಿ ಹಿಂದೆಗೆದುಕೊಳ್ಳಲಾಯಿತು.

ಮುತ್ತೂರು :

ತಿಡ್ಲಘಟ್ಟ ತಾಲ್ಲೂಕು ಮುತ್ತೂರಿನಲ್ಲಿ 13-10-80 ರಂದು ರೈತರ ಸಭೆ ನಡೆಯಿತು. ಸಭೆಗೆ ಮೊದಲು ಬೃಹತ್ ಮೆರವಣಿಗೆಯನ್ನು ರೈತರು ನಡೆಸಿದರು. ಬೆಲೆ ಏರಿಕೆ ತಡೆಯಬೇಕು, ನ್ಯಾಯಬೆಲೆ ಅಂಗಡಿಯಲ್ಲಿ ವಾರಕ್ಕೊಮ್ಮೆ ಆಹಾರ ಧಾನ್ಯ ಸರಬರಾಜು ಮಾಡಬೇಕು, ಬಾಗೇಪಲ್ಲಿ ಗೋಲಿಬಾರ್‌ನ ಪೋಲೀಸ್ ಅಧಿಕಾರಿಗಳನ್ನು ವಜಾ ಮಾಡಬೇಕು, ಮೃತರ ಕುಟುಂಬಗಳಿಗೆ 25,000 ರೂ. ಪರಿಹಾರ ನೀಡಬೇಕು ಎಂದು ಒತ್ತಾಯಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಕೋಲಾರ ಜಿಲ್ಲಾ ಸಿ. ಪಿ. ಎಂ ನ ಕಾರ್ಯದರ್ಶಿ ಜಿ. ದೊರೆಸ್ವಾಮಿ ವಹಿಸಿದ್ದರು. ಸಭೆಯಲ್ಲಿ ಲಕ್ಷ್ಮಣರೆಡ್ಡಿ, ಪಿ ಎಸ್. ವೆಂಕಟರಮಣರೆಡ್ಡಿ, ರಾಜಣ್ಣ, ವೆಂಕಟೇಶ್‌ಮೂರ್ತಿ ಮಾತನಾಡಿದರು.

ಬಿಜಾಪುರ :

ಶಿವಮೊಗ್ಗ ಜಿಲ್ಲೆಯ ರೈತರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕೆಂದು ಬಿಜಾಪುರ ಜಿಲ್ಲೆಯ ರೈತಸಂಘದ ಅಧ್ಯಕ್ಷರಾದ ಬಿ. ಎಚ್. ಕಲಾದಗಿ ಒತ್ತಾಯಿಸಿದ್ದಾರೆ. ಬಿಜಾಪುರದಲ್ಲಿ ಬರಗಾಲ ಬಂದಿದೆ, ಈ ಬಗ್ಗೆ ಗಮನಹರಿಸಬೇಕು, ಇಲ್ಲದಿದ್ದರೆ ಜಿಲ್ಲೆಯಾದ್ಯಂತ ಚಳುವಳಿ ಆರಂಭವಾಗುತ್ತದೆ ಎಂದು ಅವರು ಎಚ್ಚರಿಸಿದ್ದಾರೆ.

ರಾಯಚೂರು :

ರಾಯಚೂರು ತಾಲ್ಲೂಕು ಮಟ್ಟದ ರೈತರ ಸಭೆಯು 12-10-80ರಂದು ನಡೆಯಿತು. ಸಭೆಗೆ ಮುಂಚೆ ರೈತರು ಘೋಷಣೆಗಳನ್ನು ಕೂಗುತ್ತಾ ಜೈಲಿಗೆ ಹೋಗಿ ಶಿವಮೊಗ್ಗ ರೈತರಿಗೆ ಬೆಂಬಲ ಸೂಚಿಸಿದರು. ಸಭೆಯ ಅಧ್ಯಕ್ಷತೆಯನ್ನು ನಗರದ ಗಣ್ಯ ವಕೀಲರಾದ ಉಮಾನಾಗಪ್ಪ ಅವರು ವಹಿಸಿದ್ದರು.

ಚಂದ್ರಶೇಖರ ಬಾಳೆ ಅವರು ಸಭೆಗೆ ರೈತರನ್ನು ಸ್ವಾಗತಿಸಿದರು. ನರಗುಂದ ಹೋರಾಟದ ನಂತರ ರಾಯಚೂರು ಜಿಲ್ಲೆಯಲ್ಲಿ ಪ್ರವಾಸ ಮಾಡಿದ ಅವರು ತುಂಗಭದ್ರಾ ಎಡದಂಡೆ ಕಾಲುವೆಯ ರೈತರ ಸಮಸ್ಯೆಗಳನ್ನು ಪರಿಹರಿಸಲು ಸಮನ್ವಯ ಸಮಿತಿ ರಚಿಸಿ, ಆ ದಿಕ್ಕಿನಲ್ಲಿ ಕೆಲಸ ಮಾಡುತ್ತಿರುವುದಾಗಿ ತಿಳಿಸಿದರು. ಸಭೆಯಲ್ಲಿ ಅಮೀನರೆಡ್ಡಿ ಪಾಟೀಲ, ದೇವರು, ಚನ್ನಣ್ಣವಾಲೀಕರ, ಅನೇಕ ರೈತ ಮುಖಂಡರು ಮಾತನಾಡಿದರು.

ಮುಳಬಾಗಿಲು :

ಕೋಲಾರ ಜಿಲ್ಲೆ ಮುಳಬಾಗಿಲಿನ ರೈತಸಂಘದ ಆಶ್ರಯದಲ್ಲಿ 14-10-80 ರಂದು ಬಹಿರಂಗ ಸಭೆ ನಡೆಯಿತು. ಬೆಲೆಏರಿಕೆ, ಕ್ಷಾಮಕ್ಕೆ ತುತ್ತಾಗಿರುವ ಕೋಲಾರ ಜಿಲ್ಲೆ, ನಿರುದ್ಯೋಗ ಸಮಸ್ಯೆ ಇವುಗಳ ಬಗ್ಗೆ ಗಮನಹರಿಸದ ಸರ್ಕಾರದ ನೀತಿಯನ್ನು ಸಭೆಯಲ್ಲಿ ಖಂಡಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ವಕೀಲ ಆರ್. ವೆಂಕಟರಾಮಯ್ಯನವರು ವಹಿಸಿದ್ದರು. ಸಭೆಯನ್ನು ಉದ್ದೇಶಿಸಿ, ಸಿ. ಐ. ಟಿ. ಯು. ಮುಖಂಡ ಹೆಚ್. ಅಬ್ದುಲ್ ಮಜೀದ್, ರೈತಸಂಘದ ಕಾರ್ಯದರ್ಶಿ ಬಿ.ವಿ. ನಾಗಿರೆಡ್ಡಿ, ಜಗನ್ನಾಥ್, ವಿಜಯಕುಮಾರ್, ಮಾಜಿ ಎಂ. ಎಲ್. ಎ., ಪಿ. ವೆಂಕಟಗಿರಿಯಪ್ಪ ಮಾತನಾಡಿದರು.

ನಂತರ ನಡೆದ ರೈತಸಂಘ ಕಾರ್ಯಕರ್ತರ ಸಭೆಯಲ್ಲಿ ವಿರೋಧಪಕ್ಷಗಳ ಸಮನ್ವಯ ಸಮಿತಿಯ ಸಂಚಾಲಕ ಪಿ. ವೆಂಕಟಗಿರಿಯಪ್ಪನವರ ಅಧ್ಯಕ್ಷತೆಯಲ್ಲಿ 27-10-80ರಿಂದ ತೀವ್ರ ಚಳುವಳಿ ನಡೆಸಲು ರೈತರು ತೀರ್ಮಾನಿಸಿದರು. ಮುಳಬಾಗಿಲು ತಾಲ್ಲೂಕು ಹಾಗೂ ಕೋಲಾರ ಜಿಲ್ಲೆಯನ್ನು ಕ್ಷಾಮ ಪ್ರದೇಶವೆಂದು ಸಾರಬೇಕು. ಕೃಷಿಕಾರ್ಮಿಕರಿಗೆ ಪರಿಹಾರ ಕಾಮಗಾರಿ ಕೆಲಸ ಒದಗಿಸಬೇಕು, ಸೀಮೆಗೊಬ್ಬರ, ಪಂಪ್‌ಸೆಟ್ ಬೆಲೆ ಇಳಿಯಬೇಕು, ಕೃಷಿಕಾರ್ಮಿಕರಿಗೆ ನಿವೃತ್ತಿ ವೇತನ ಕೊಡಬೇಕು ಮುಂತಾದ ಬೇಡಿಕೆಗಳನ್ನು ಚಳುವಳಿ ಒತ್ತಾಯಿಸಲಿದೆ.

ಕೋಣಿ :

ದ. ಕ. ಜಿಲ್ಲೆ ಕುಂದಾಪುರ ತಾಲೂಕಿನ ಕೋಣಿ ಗ್ರಾಮದ ರೈತ ಸಂಘದ ಸಭೆ ತಾ.7-10-80 ರಂದು ನಡೆಯಿತು. ಕೆ. ಅನಂತ ಪೂಜಾರಿ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಅಬ್ರಹಾಂ ಕರ್ಕಡ ಪಾಲ್ಕಿ ಅತಿಥಿಯಾಗಿ ಆಗಮಿಸಿದ್ದರು. ಕೋಣಿ ರೈತ ಸಂಘದ ಅಧ್ಯಕ್ಷ ಕೆ. ಆನಂದ ಭಂಡಾರಿ ಸ್ವಾಗತಿಸಿದ ನಂತರ ಅಬ್ರಹಾಂ ಕರ್ಕಡ ಅವರು ಮಾತನಾಡಿ ರೈತ ವಿರೋಧಿ ನೀತಿಯ ವಿರುದ್ಧ ಸಂಘಟಿತ ಚಳುವಳಿ ನಡೆಸಲು ಕರೆಯಿತ್ತರು. ಕೃಷಿ ಕೂಲಿಗಾರರ ವೇತನ ಹೆಚ್ಚಿಸುವ ಬೇಡಿಕೆಗೆ ಬೆಂಬಲ ಕೊಡಬೇಕೆಂದು ಅನಂತ ಪೂಜಾರಿ ಅವರು ವಿನಂತಿಸಿದರು. ಈ ಬಗೆಗಿನ ಹೋರಾಟಕ್ಕೆ ಕೋಣಿ ರೈತಸಂಘ ಬೆಂಬಲ ಕೊಡಲು ನಿರ್ಧರಿಸಿತು. ಯುವಜನ ಸಂಘಟನೆಯ ಕೆ. ರಾಧಾಕೃಷ್ಣ ಸಭೆಗೆ ವಂದಿಸಿದರು.

○

ಎಸ್. ಎಫ್. ಐ. ರಾಜ್ಯಸಮಿತಿ ಸಭೆ

ದಿನಾಂಕ 7-10-80ರಂದು ಬೆಂಗಳೂರಿನಲ್ಲಿ ಎಸ್ ಎಫ್. ಐ. ರಾಜ್ಯ ಸಮಿತಿ ಸಭೆ ಸೇರಿ ದೇಶದಲ್ಲಿನ ಪರಿಸ್ಥಿತಿಯ ಬಗ್ಗೆ ಹಾಗೂ ವಿದ್ಯಾರ್ಥಿ ಚಳುವಳಿಯ ಬಗ್ಗೆ ಚರ್ಚೆ ನಡೆಸಿತು.

ರಾಜ್ಯದಲ್ಲಿ ವಿದ್ಯಾರ್ಥಿ ಸಂಘಟನೆಯನ್ನು ಬಲಪಡಿಸಲು 1981ರ ಜನವರಿ ಮೊದಲ ವಾರದಲ್ಲಿ ಕೋಲಾರ ಜಿಲ್ಲೆಯ ಚಿಂತಾಮಣಿಯಲ್ಲಿ ಎಸ್. ಎಫ್. ಐ ನ ಮೂರನೇ ರಾಜ್ಯ ಸಮ್ಮೇಳನವನ್ನು ನಡೆಸಲು ತೀರ್ಮಾನ ಕೈಗೊಳ್ಳಲಾಯಿತು.

ಡಿಸೆಂಬರ್ 30, 1980ರಂದು ಎಸ್. ಎಫ್. ಐ ನ ಹತ್ತನೇ ವಾರ್ಷಿಕೋತ್ಸವವನ್ನು ರಾಜ್ಯಾದ್ಯಂತ ಆಚರಿಸಬೇಕಾಗಿ ಸಭೆ ತೀರ್ಮಾನಿಸಿತು.

ಹಾಗೂ ಸೆಪ್ಟೆಂಬರ್ 22ರಂದು ರಾಷ್ಟ್ರಪತಿಯವರು ಹೊರಡಿಸಿರುವ "ರಾಷ್ಟ್ರೀಯ ಭದ್ರತಾ ಸುಗ್ರೀವಾಜ್ಞೆ"ಯನ್ನು ಹಿಂತೆಗೆದುಕೊಳ್ಳುವಂತೆ ಕೇಂದ್ರ ಸರಕಾರವನ್ನು ಒತ್ತಾಯಪಡಿಸುವ ಮತ್ತು ಇತ್ತೀಚಿನ ರೈತ ಚಳುವಳಿಯನ್ನು ಬೆಂಬಲಿಸುವ ಗೊತ್ತುವಳಿಗಳನ್ನು ಮಂಡಿಸಲಾಯಿತು.

●

ಅವಿರೋಧ ಆಯ್ಕೆ

ದ. ಕ. ಜಿಲ್ಲೆಯ ಪಡುಪಣಂಬೂರು ಸಹಕಾರಿ ವ್ಯವಸಾಯ ಬ್ಯಾಂಕಿನ ನಿರ್ದೇಶಕ ಮಂಡಳಿ ಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾಂ. ಸುಂದರ ಸಾಲಿಯಾನ್ ಅವರು ತೋಕೂರು ಗ್ರಾಮದಿಂದ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ●

ನಕ್ಸಲ್‌ವಾದದ ಬಿಕ್ಕಟ್ಟು

[3ನೇ ಪುಟದಿಂದ]

ಸಿದೆ ಎಂದು ತಿಳಿದು ಬಂದಿದೆ. ಇದರಲ್ಲಿ ಸಿ. ಪಿ. ಐ. (ಎಂ)ನ ಕೆಲವು ನಾಯಕರ ಮೇಲೆ ಹಲ್ಲೆ ಮತ್ತು ಕೊಲೆಮಾಡುವ ಯೋಜನೆಯೂ ಸೇರಿದೆ. ಆಂಧ್ರಪ್ರದೇಶದ ಮಟ್ಟಿಗೆ ಹೇಳುವುದಾದರೆ, ಸುಪ್ರಸಿದ್ಧ ಸಿ. ಪಿ. ಐ (ಎಂ) ನಾಯಕರೂ, ವಿಧಾನ ಸಭಾ ಸದಸ್ಯರೂ ಆದ ಕಾಂ. ಓಂಕಾರ್ ಮೇಲೆ ಎಡೆಬಿಡದೆ ನಡೆದ ಹಲ್ಲೆಗಳು ನಕ್ಸಲೀಯರು, ಕಾಂಗ್ರೆಸ್ (ಐ)ನೊಂದಿಗೆ ಹಾಗೂ ಕಾಂಗ್ರೆಸ್ (ಐ) ಸರಕಾರದ ಪೋಲೀಸ್ ಬೆಂಬಲದೊಡನೆ ನಡೆಸಿದ ಕೃತ್ಯಗಳು, ಆಂಧ್ರಪ್ರದೇಶ ಹಾಗೂ ಕೇರಳ ಎರಡೂ ಕಡೆ ನಕ್ಸಲೀಯರು ಕಾಂಗ್ರೆಸ್ (ಐ)ನ ನಂಬಿಗಸ್ತ ಗೆಳೆಯರು, ಹೆಚ್ಚಿನವರು ಅವರ ಬಾಡಿಗೆ ಗೂಂಡಾಗಳೂ ಆಗಿ ವಿಘಟಿತರಾಗಿದ್ದಾರೆ.

ಏಕೆಂದರೆ ಜಗತ್ತಿನಾದ್ಯಂತ ಕ್ರಾಂತಿಕಾರಿ ಚಳುವಳಿಯ ಅನುಭವವೆಂದರೆ ಚಳುವಳಿಯ ಒಂದು ವಿಭಾಗ ಎಡ-ದುಸ್ಸಾಹಸೀ ಮಾರ್ಗ ಅನುಸರಿಸಿದರೆ ಸರಿಯಾದ ಸಮಯದಲ್ಲಿ ಅದನ್ನು ಸರಿಪಡಿಸಿಕೊಳ್ಳಬೇಕು. ಇಲ್ಲವಾದರೆ ಅದು ಕೇವಲ ಭಯೋತ್ಪಾದಕರ ಗುಂಪಾಗಿ ವಿಘಟನೆ ಹೊಂದುತ್ತದೆ. ಅದನ್ನು ಆಗ ಆಳುವವರ್ಗಗಳು, ಅವುಗಳ ಪ್ರಭುತ್ವ ಹಾಗೂ ಸರಕಾರ ತನ್ನ ಉದ್ದೇಶಕ್ಕೆ ಬಳಸಿಕೊಳ್ಳುತ್ತದೆ. ವಿವಿಧ ಗುಂಪುಗಳಾಗಿ ಒಡೆದು ಹೋಗಿರುವ ನಕ್ಸಲೀಯ ಚಳವಳಿ ಇಂತಹ ಚಳುವಳಿಯಾಗಿ ತೀವ್ರವಾಗಿ ಮಾರ್ಪಾಡಾಗುತ್ತಿದೆ (ಅದು ಈಗಾಗಲೇ ಹಾಗಾಗಿರದಿದ್ದರೆ). ಈಗಿರುವ ಪ್ರಶ್ನೆಯೆಂದರೆ ಅದನ್ನು ಉಳಿಸಬಯಸುವವರು ಯಾರಾದರೂ ಚಳುವಳಿಯೊಳಗೆ ಉಳಿದಿದ್ದಾರೆಯೇ ಎಂಬುದು.

○

ಮುಳಬಾಗಿಲು ಬೀಡಿ ಕಾರ್ಮಿಕರ ಅಧಿವೇಶನ

ಕೋಲಾರ ಜಿಲ್ಲೆಯ ಮುಳಬಾಗಿಲಿನ ಬೀಡಿ ಕಾರ್ಮಿಕರು ತಮ್ಮದೇ ಆದ ಸಂಘಟನೆಯನ್ನು ಸ್ಥಾಪಿಸಿಕೊಳ್ಳಲು 12-10-80ರಂದು ಅಲ್ಲಿ ಅಧಿವೇಶನ ಸೇರಿದ್ದರು. ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಲಕ್ಷ್ಮಣ ರೆಡ್ಡಿ ಅವರು ಕೆಂಬಾವುಟ ಹಾರಿಸಿ ಅಧಿವೇಶನವನ್ನು ಉದ್ಘಾಟಿಸಿದರು. ಕೋಲಾರ ಜಿಲ್ಲೆ ಜನರಲ್ ವರ್ಕರ್ಸ್ ಯೂನಿಯನ್ನಿನ ಕಾರ್ಯದರ್ಶಿ ಹೆಚ್. ಅಬ್ದುಲ್ ಮಜೀದ್ ಅವರು ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು. ಅನೇಕ ಬೀಡಿ ಕಾರ್ಮಿಕರು ಚರ್ಚೆಯಲ್ಲಿ ಭಾಗವಹಿಸಿ, ಸಂಘಟನೆಯ ಅಗತ್ಯವನ್ನು ಒತ್ತಾಯಿಸಿದರು. ಸಮಾವೇಶದಲ್ಲಿ ರಾಜ್ಯ ಬೀಡಿ ಫೆಡರೇಶನ್ನಿನ ಕಾರ್ಯದರ್ಶಿ ಮಹಮದ್ ದಸ್ತಗೀರ್, ಬೆಂಗಳೂರು ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಪಿ. ಜಗನ್ನಾಥ್, ಬೆಂಗಳೂರು ದ. ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಶಾಮಣ್ಣ ರೆಡ್ಡಿ ಮುಂತಾದವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ನಂತರ 50 ಸದಸ್ಯರ ಕೌನ್ಸಿಲ್‌ಅನ್ನು ಚುನಾಯಿಸಲಾಯಿತು.

ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಕೂಗುತ್ತಾ ಬಹಿರಂಗ ಸಭೆಗೆ ಬಂದು ನೆರೆದರು. ಅಬ್ದುಲ್ ಮಜೀದ್, ಪಿ. ಜಗನ್ನಾಥ್, ಶಾಮಣ್ಣ ರೆಡ್ಡಿ, ಲಕ್ಷ್ಮಣ ರೆಡ್ಡಿ ಮಾತನಾಡಿದರು. ಇದಾಯತುಲ್ಲಾ ಅವರು ವಂದನೆ ಸಲ್ಲಿಸಿದರು. ರಾತ್ರಿ ಕೌನ್ಸಿಲ್ ಸಭೆ ಸೇರಿ 13 ಮಂದಿಯ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಿದರು. ಉಸ್ಮಾನ್ ಶರೀಫ್ ಅಧ್ಯಕ್ಷರಾಗಿ, ಪ್ಯಾರೇಜಾನ್ ಖಜಾಂಚಿಯಾಗಿ ಆಯ್ಕೆಯಾದರು.

○

ಸಹಕಾರೀ ಸಂಘ ಮಹಾಸಭೆ

ಕೆನರಾ ವರ್ಕ್‌ಶಾಪಿನ ಕೆಲಸಗಾರರ ಸಹಕಾರೀ ಸಂಘದ 21ನೇ ವಾರ್ಷಿಕ ಮಹಾಸಭೆಯು ತಾ. 27 – 9 - 1980 ರಲ್ಲು ಕೆನರಾ ವರ್ಕ್‌ಶಾಪಿನ 'ಲೈಬ್ರರಿ ಸದನದಲ್ಲಿ' ಸಂಘದ ಎಕ್ಸ್‌ಅಫೀಸ್ ಪ್ರೆಸಿಡೆಂಟ್ ಹಾಗೂ ಕೆನರಾ ವರ್ಕ್‌ಶಾಪಿನ ಮೇನೇಜಿಂಗ್ ಡೈರೆಕ್ಟರ್‌ರವರಾದ ಶ್ರೀ ಎಸ್. ವಿ. ಕಿಡ್ವಾಯಿವರ ಅಧ್ಯಕ್ಷತೆಯಲ್ಲಿ ಜರಗಿತು.

ಆರಂಭದಲ್ಲಿ ಸಂಘದ ಕಾರ್ಯದರ್ಶಿ ಶ್ರೀ ಸಿ. ನಾರಾಯಣರವರು ಸ್ವಾಗತಿಸಿ 1979-80ರ ಸಂಘದ ಚಟುವಟಿಕೆಗಳ ವರದಿ ಮಂಡಿಸಿದರು. ಅಧ್ಯಕ್ಷರು ಸಂಘಕ್ಕೆ ಶುಭಕೋರಿ ರೂ. 1900 ಧನ ಸಹಾಯ ನೀಡುವ ಭರವಸೆ ನೀಡಿದರು.

1980-81ರ ಸಾಲಿಗೆ 7 ಮಂದಿ ಡೈರೆಕ್ಟರರ ಸ್ಥಾನಕ್ಕೆ 11 ಮಂದಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದು ಇವರಲ್ಲಿ ಸಿ. ಐ ಟಿ. ಯು. ಸಂಘಟನೆಗೆ ಸೇರಿದವರಾದ ಸರ್ವಶ್ರೀಗಳಾದ ಸಿ. ನಾರಾಯಣ, ಕೆ. ಸದಾನಂದ, ಕೆ. ಶಂಕರ, ಅಪ್ಪಕುಟ್ಟನ್‌ಪಿಳ್ಳೆ, ಬಿ. ಬಾಬು, ಎ. ಶಾಂತಪ್ಪ ಮತ್ತು ಲಿಂಗಪ್ಪ ಪೂಜಾರಿ ಮೊದಲಾದ 7 ಮಂದಿ ಉಮೇದುವಾರರು ಬಹುಮತದಿಂದ ಚುನಾಯಿತರಾಗಿರುತ್ತಾರೆ.

●

'ಇಸ್ಲಾಮಿಕ್ ಕ್ರಾಂತಿ'ಯ ಸ್ವರೂಪ

[5ನೇ ಪುಟದಿಂದ]

ಯುರೋಪಿನ ದೇಶಗಳು ವಿಧಿಸಿರುವ ಆರ್ಥಿಕ ದಿಗ್ಬಂಧನದಿಂದ ಆರ್ಥಿಕ ಪರಿಸ್ಥಿತಿ ಪೂರ್ಣ ಏರುಪೇರಾಗದಿದ್ದರೂ ಸಮಸ್ಯೆ ಉಲ್ಬಣಗೊಂಡಿದೆ. ಬಳಕೆವಸ್ತು ಮತ್ತು ಆಹಾರವಸ್ತುಗಳ ಆಮದನ್ನು ಕಡಿತಮಾಡುವ ಮೂಲಕ ಇದಕ್ಕಾಗಿ ವಿನಿಮಯ ಮಾಡುವ ಅಮೂಲ್ಯ ಎಣ್ಣೆಯನ್ನು ಉಳಿಸಿ, ಆದಾಯದಿಂದ ಕೃಷಿ ಮತ್ತು ಲಘು ಕೈಗಾರಿಕೆಗಳನ್ನು ಪ್ರೋತ್ಸಾಹಿಸುವ ಮತ್ತು ದೊಡ್ಡ ಕೈಗಾರಿಕೆಗಳನ್ನು ಸರಕಾರ ವಹಿಸಿ, ಉಳಿದ ಕೈಗಾರಿಕೆ ಮತ್ತು ವಾಣಿಜ್ಯವನ್ನು ಖಾಸಗಿ ಒಡೆತನದಲ್ಲಿ ಬಿಡುವ ಮಿಶ್ರ ಆರ್ಥಿಕ ವ್ಯವಸ್ಥೆಯನ್ನು ಅಧ್ಯಕ್ಷ ಬನಿಸದರ್ ಸೂಚಿಸುತ್ತಾರೆ. ಆದರೆ ಇದನ್ನು ಜಾರಿಗೆ ತರುವ ರಾಜಕೀಯ ಅಧಿಕಾರ ಅವರ ಕೈಯಲ್ಲಿಲ್ಲ —ನಿಜವಾದ ಅಧಿಕಾರ ತಮ್ಮ ಕೈಯಲ್ಲಿಟ್ಟುಕೊಂಡಿರುವ ನಾಯಕರು ಇದರ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಒಟ್ಟಾರೆ ಗಂಭೀರವಾದ ಆರ್ಥಿಕ ಧೋರಣೆ, ಯೋಜನೆ ಇಲ್ಲದೆ ಸರ್ಕಾರ ಹೇಗೋ ತಾತ್ಕಾಲಿಕ ನೀತಿಗಳಿಂದ ದೈನಂದಿನ ವಿಚಾರಗಳನ್ನು ನಿಭಾಯಿಸುತ್ತಿದೆ.

ರಾಜಕೀಯ, ಆರ್ಥಿಕ ಸಮಸ್ಯೆ ಮತ್ತು ಅಲ್ಪಸಂಖ್ಯಾತರ ಸಮಸ್ಯೆಯನ್ನು ಧಾರ್ಮಿಕ ಮುಖಂಡರು ನಿಭಾಯಿಸುತ್ತಿರುವ ರೀತಿ ನೋಡಿದರೆ ಇರಾನಿನ ಯಾವುದೇ ಸಮಸ್ಯೆ 'ಇಸ್ಲಾಮಿಕ್ ಕ್ರಾಂತಿ'ಯಿಂದ ಪರಿಹಾರವಾಗುವ ಹಾಗೆ ಕಾಣುವುದಿಲ್ಲ. ಇಸ್ಲಾಮಿಕ್ ಕ್ರಾಂತಿಕಾರಿ ಸಿದ್ಧಾಂತ ಇವೆರಡು ಸಮಸ್ಯೆಗಳಿಗೆ ಉತ್ತರ ಕೊಡುವುದರಲ್ಲಿ ಪೂರ್ಣವಾಗಿ ಸೋತಿದೆ. ಅಮೇರಿಕನ್ ಸಾಮ್ರಾಜ್ಯಶಾಹಿ ಮತ್ತು ಅದರ ಏಜಂಟ್ ಷಾನ ವಿರುದ್ಧ ವಿವಿಧ ಆಕಾಂಕ್ಷೆಗಳಿರುವ, ಸಾಮಾಜಿಕ ಆರ್ಥಿಕ ಆಸಕ್ತಿಗಳು ಭಿನ್ನವಿರುವ ಬೇರೆ ಬೇರೆ ಸಾಮಾಜಿಕ ವರ್ಗಗಳನ್ನು ತಾತ್ಕಾಲಿಕವಾಗಿ ಒಗ್ಗೂಡಿಸುವುದಕ್ಕಿಂತ ಇದರ ಸಫಲತೆ ಸೀಮಿತವಾಗಿದೆ.

'ಇಸ್ಲಾಮಿಕ್ ಕ್ರಾಂತಿ'ಯ ಗಾಳಿ ಬೀಸುತ್ತಿದೆ ಎನ್ನಲಾದ ಬೇರೆ ಬೇರೆ ದೇಶಗಳಲ್ಲಿ ಇಸ್ಲಾಂ ರಾಜಕೀಯದಲ್ಲಿ ಯಾವ ಪಾತ್ರವಹಿಸುತ್ತಿದೆ ಎಂದು ಸೂಕ್ಷ್ಮವಾಗಿ ಪರಿಶೀಲಿಸೋಣ.

ಸುಮಾರಾಗಿ ಎಲ್ಲಾ ಮುಸ್ಲಿಂ ಬಹುಸಂಖ್ಯಾತ ದೇಶಗಳಲ್ಲಿ ಮುಸ್ಲಿಂ ಪುನರುತ್ಥಾನವಾದಿ ಗುಂಪುಗಳು ಮೊದಲಿನಿಂದಲೂ ಇದೆ ಎಂದು ಗಮನಿಸಬೇಕು.

ಇತರ ದೇಶಗಳಲ್ಲಿ ಇಸ್ಲಾಂ ಚಳುವಳಿ :

ಲಿಬ್ಯಾದಲ್ಲಿ ರಾಜನನ್ನು ಕಿತ್ತೊಗೆದು ಬಂದ ಗಡ್ಡಾಫಿಯ ಆಡಳಿತ ಸಹ ಇಸ್ಲಾಂ ಸಿದ್ಧಾಂತದ ಬಗ್ಗೆ ಮಾತನಾಡುತ್ತದೆ. ಆದರೆ ಅದು ಅಧಿಕಾರಕ್ಕೆ ಇಸ್ಲಾಂಗೆ ಹಿಂತಿರುಗುವ ಘೋಷಣೆಯ ಮೇಲೆ ಬಂದಿರಲಿಲ್ಲ. ನಿಜವಾಗಿಯೂ ಕ್ರಾಂತಿಪೂರ್ವದಲ್ಲಿ ರಾಜ ಧಾರ್ಮಿಕ ಮುಖ್ಯಸ್ಥ ಸಹ ಆಗಿದ್ದ. ಆದ್ದರಿಂದ ಅಲ್ಲಿ ಇಸ್ಲಾಂ ಸಿದ್ಧಾಂತ ಮೊದಲಿನಂತೆ ಬರಿಯ ಒಂದು ಧಾರ್ಮಿಕ ಸಿದ್ಧಾಂತವಾಗಿ ಮುಂದುವರಿಯುತ್ತಿದೆ.

ಪಾಕಿಸ್ತಾನ ಧರ್ಮದ ಹೆಸರಿನಲ್ಲೇ ರಚಿತವಾದ ದೇಶ. ಆದರೆ ಇಸ್ಲಾಂ ಅಲ್ಲಿ ಸುಮಾರು ಎರಡು-ಎರಡುವರೆ ದಶಕಗಳವರೆಗೂ ರಾಜಕೀಯದಲ್ಲಿ ಹೆಚ್ಚು ಪಾತ್ರವಹಿಸಲಿಲ್ಲ. ಇಲ್ಲಿ ದೇಶದ ಅಸ್ತಿತ್ವಕ್ಕೆ ಅಪಾಯ ಬಂದಿರುವುದು ಬಲೂಚಿ ಪಖ್ತೂನ್ ಮತ್ತು ಬಂಗಾಲಿ ಮುಂತಾದ ಇತರ ರಾಷ್ಟ್ರೀಯತೆಗಳಿಂದ. ಪಂಜಾಬ್, ಸಿಂಧ್‌ನ ನಾಯಕರು ಕೇಂದ್ರ ಸರ್ಕಾರದಲ್ಲಿ ಪ್ರಭಾವಶಾಲಿಯಾಗಿದ್ದಾರೆ. ಬಂಗಾಲಿ ಮುಸ್ಲಿಮರು ಈಗಾಗಲೇ ಬೇರೆ ದೇಶ ರಚಿಸಿಕೊಂಡಿದ್ದಾರೆ. ಇತ್ತೀಚಿನ ಜಿಯಾ-ಉಲ್-ಹಕ್ ಮಿಲಿಟರಿ ಸರ್ವಾಧಿಕಾರಿ ಬಿಟ್ಟರೆ ಬೇರೆ ಯಾವ ಹಿಂದಿನ ಸರ್ಕಾರ ಸಹ ಪ್ರಭುತ್ವದ ಇಸ್ಲಾಂ ಸ್ವರೂಪದ ಬಗ್ಗೆ ಒತ್ತಾಯಿಸಲಿಲ್ಲ. ಜಿಯಾ-ಉಲ್-ಹಕ್ ಆಡಳಿತ ಮಾತ್ರ ತನ್ನ ಸರ್ವಾಧಿಕಾರಕ್ಕೆ ಒಂದು ಸೈದ್ಧಾಂತಿಕ ನೆಲೆಕಟ್ಟಿಕೊಡಲು ಮತ್ತು ಬೇರೆ ಸಮಸ್ಯೆಗಳಿಂದ ಜನರ ಗಮನಹರಿಸಲು 'ಇಸ್ಲಾಂ ಸೂತ್ರ'ಗಳಿಗೆ ಹಿಂದಿರುವ ಘೋಷಣೆ ಎತ್ತಿದೆ.

ಅಫಘಾನಿಸ್ತಾನದಲ್ಲಿ ಇತ್ತೀಚಿನ ಮುಸ್ಲಿಂ ಚಳುವಳಿ ಪೂರ್ಣವಾಗಿ ಕ್ರಾಂತಿ-ವಿರೋಧಿ ಸ್ವರೂಪವನ್ನು ಪಡೆದಿದೆ. ಇದು ಹಿಂದಿನ ರಾಜನ ಸರ್ಕಾರವನ್ನಾಗಲಿ ಅದನ್ನು ಉರುಳಿಸಿ ಬಂದ ದಾವೂದ್ ಸರ್ಕಾರವನ್ನಾಗಲಿ ಎಂದೂ ವಿರೋಧಿಸಿರಲಿಲ್ಲ. ದಾವೂದನ್ನು ಕಿತ್ತುಹಾಕಿ ಬಂದ ಎಡಪಂಥೀಯ ಸರ್ಕಾರಕ್ಕೆ ವಿರುದ್ಧವಾಗಿ ಮಾತ್ರ ಇದು ಹೋರಾಡುತ್ತಿದೆ.

ಇಜಿಪ್ಟ್‌ನಲ್ಲಿ 1920ರಷ್ಟು ಹಿಂದಿನಿಂದಲೂ ಮುಸ್ಲಿಂ ಭ್ರಾತೃತ್ವ ಎಂಬ ಮುಸ್ಲಿಂ ಮೂಲಭೂತವಾದಿ ಗುಂಪೊಂದು ಅಸ್ತಿತ್ವದಲ್ಲಿದೆ ಆದರೆ 1950ರಲ್ಲಿ ರಾಜಪ್ರಭುತ್ವ (monarch)ವನ್ನು ಕಿತ್ತುಹಾಕುವುದರಲ್ಲಿ ಇದು ಮುಖ್ಯ ಪಾತ್ರವಹಿಸಲಿಲ್ಲ ಇದನ್ನು ಜನರಲ್ ನಾಸೆರ್‌ರ ಫ್ರೀ ಆಫಿಸರ್ಸ್ ಗುಂಪು ನಡೆಸಿತು. ನಾಸೇರ್‌ರ ಆಡಳಿತದಲ್ಲಿ ಇದು ಸಾಕಷ್ಟು ದುರ್ಬಲವಾಗಿದ್ದು, ಈಗ ಅಧ್ಯಕ್ಷ ಸಾದತ್‌ರ ಆಡಳಿತದಲ್ಲಿ ಮತ್ತೆ ತಲೆ ಎತ್ತುತ್ತಿದೆ. ಎಡಪಂಥೀಯ ಶಕ್ತಿಗಳನ್ನು ಇಸ್ಲಾಂ-ವಿರೋಧಿ ಎಂದು ರಾಜಕೀಯವಾಗಿ ಎದುರಿಸಲು ಇದು ಸಹಾಯಕವಾಗುತ್ತದೆ ಎಂದು ಅದರ ಪ್ರಭಾವ ಬೆಳೆಯುತ್ತಿರುವುದನ್ನು ಅಧ್ಯಕ್ಷ ಸಾದತ್ ಸರ್ಕಾರ ಸಹಿಸುತ್ತಿದೆ

ಸಿರಿಯಾದಲ್ಲಿ 'ಮುಸ್ಲಿಂ ಭ್ರಾತೃತ್ವ' ಗುಂಪು ಕಾನೂನುಬಾಹಿರವಾಗಿದ್ದರೂ ಇತ್ತೀಚೆಗೆ ಬೆಳೆಯುತ್ತಿದೆ. ಅಲ್ಲಿನ ಅಧ್ಯಕ್ಷ ಅಸದ್‌ರ ಸರ್ಕಾರದಲ್ಲಿ ಅಲಾಉತಿ ಅಲ್ಪಸಂಖ್ಯಾತ ಮತೀಯ ಗುಂಪು ಪ್ರಭಾವಶಾಲಿಯಾಗಿರುವುದರ ವಿರುದ್ಧ ಎಲ್ಲಾ ಅತೃಪ್ತ ಸಾಮಾಜಿಕ ಗುಂಪುಗಳ ಆಕ್ರೋಶ ಕೇಂದ್ರೀಕರಿಸಲು ಪ್ರಯತ್ನಿಸುತ್ತಿದೆ (ಅಲಾಉತಿ ಇಸ್ಲಾಂನ ಕೆಲವು ಸಾಮಾನ್ಯ ನಂಬಿಕೆಗಳಿಗೆ ವ್ಯತಿರಿಕ್ತ ನಂಬಿಕೆಗಳಿರುವ ಶಿಯಾ ಪಂಥದ ಉಪಪಂಗಡ) ಅಲಾಉತಿಗಳು ಮುಸ್ಲಿಮರೇ ಅಲ್ಲ. ಅವರು ಎಲ್ಲಾ ಮುಸ್ಲಿಮರನ್ನು ಆಳುತ್ತಿದ್ದಾರೆ ಎಂದು ಈ ಗುಂಪಿನ ಪ್ರಚಾರ.

ಉತ್ತರ ಯೆಮೆನ್‌ನಲ್ಲಿ ಹೆಚ್ಚು ಕಡಿಮೆ ಪಾಶ್ಚಿಮಾತ್ಯೀಕರಣ ನಡೆದೇ ಇಲ್ಲ. ಆದ್ದರಿಂದ 'ಇಸ್ಲಾಂಗೆ ಹಿಂತಿರುಗಿ' ಇತ್ಯಾದಿ ಘೋಷಣೆಗೆ ಅಲ್ಲಿ ಅರ್ಥವೇ ಇಲ್ಲ. ದಕ್ಷಿಣ ಯೆಮೆನ್‌ನಲ್ಲಿ ಸ್ವಾತಂತ್ರ್ಯ ಮತ್ತು ನಂತರ ನಡೆದ ಸಾಮಾಜಿಕ ಕ್ರಾಂತಿಯ ಮೊದಲು ಸಯ್ಯದ್ ಎಂಬ ಕುಟುಂಬಗಳ ಗುಂಪು ತನ್ನನ್ನು ಪ್ರವಾದಿ ಮಹಮ್ಮದರ ವಂಶಜರು ಎಂದು ಹೇಳಿಕೊಳ್ಳುತ್ತಿತ್ತು. ಅದರ ಕೈಯಲ್ಲಿ ಎಲ್ಲಾ ಆರ್ಥಿಕ ಶಕ್ತಿ ಸಹ ಕೇಂದ್ರೀಕೃತವಾಗಿತ್ತು. ದಕ್ಷಿಣ ಯೆಮೆನ್ ಕ್ರಾಂತಿ ಈ ಧಾರ್ಮಿಕ-ಆರ್ಥಿಕ ಶೋಷಣೆಯ ವಿರುದ್ಧವೇ ಆದದ್ದರಿಂದ ಇಸ್ಲಾಂ ಪುನರುತ್ಥಾನವಾದ ಒಂದು ಆಕರ್ಷಕ ಸಿದ್ಧಾಂತವಾಗಿ ಈ ದೇಶದಲ್ಲಿ ಸಾಮಾನ್ಯ ಜನತೆಗೆ ಕಾಣುವ ಸಾಧ್ಯತೆ ಇಲ್ಲ.

ಮೊರೊಕ್ಕೊ, ಅಲ್ಜೀರಿಯಾ, ಟುನಿಸಿಯಾ, ಇಂಡೋನೇಶ್ಯಾ, ಮತ್ತು ಮಲಯೇಶ್ಯಾದಲ್ಲಿ ಸಂಘಟಿತವಾದ ಇಸ್ಲಾಮ್ ಮೂಲಭೂತವಾದಿ (ಅಥವಾ ಪುನರುತ್ಥಾನವಾದಿ) ಗುಂಪುಗಳಿಲ್ಲ. ಆದರೆ ಕೆಲವೊಮ್ಮೆ ಈ ದೇಶಗಳಲ್ಲಿ ಸಮಾಜದ ಆಧುನೀಕರಣದಿಂದ ತೊಂದರೆಗೊಳಗಾದ ವರ್ಗಗಳ ಅತೃಪ್ತಿ, ಆಧುನಿಕ ಸಮಾಜದ ಧಾರ್ಮಿಕ ನಿರ್ಲಕ್ಷತೆಯ ವಿರುದ್ಧ ಪ್ರತಿಭಟನೆಯ ರೂಪ ಪಡೆಯುತ್ತದೆ. ವಿರೋಧಿ ಗುಂಪುಗಳು ಇದರ ಲಾಭ ಪಡೆಯಲು 'ಇಸ್ಲಾಂಗೆ ಹಿಂತಿರುಗಿ' ಕೂಗು ಹಾಕುತ್ತವೆ.

ಸೌದಿ ಅರೇಬಿಯಾ, ಯು. ಎ. ಇ. ಮತ್ತು ಸ್ವಲ್ಪ ಮಟ್ಟಿಗೆ ಕುವೈತ್, ಮಸ್ಕತ್, ಒಮ್ಮಾನ್ ಮುಂತಾದ ದೇಶಗಳಲ್ಲಿ ಸಾಮಾಜಿಕ ಅತೃಪ್ತಿಯನ್ನು ದಮನಗೊಳಿಸಲು ತಾವು ಇಸ್ಲಾಂ ಸಂಪ್ರದಾಯದ ರಕ್ಷಕರೆಂದು ಆಳುವ ಗುಂಪುಗಳೇ ತೋರಿಸಲು ಪ್ರಯತ್ನಿಸುತ್ತವೆ. ಎಲ್ಲಾ ಸಮಸ್ಯೆಗಳಿಗೂ ಇಸ್ಲಾಂ ಸಂಪ್ರದಾಯವನ್ನು ಅಕ್ಷರಶಃ ಅನುಸರಿಸುವುದೇ ಸರಿಯಾದ ಪರಿಹಾರ ಎಂದು ಎಲ್ಲಾ ಅತೃಪ್ತ ವರ್ಗಗಳನ್ನು ನಂಬಿಸಲು ಪ್ರಯತ್ನಿಸುತ್ತಿವೆ.

"ಈ ಎಲ್ಲಾ ಮುಸ್ಲಿಂ ದೇಶಗಳ ಪರಿಸ್ಥಿತಿಯನ್ನು ಸ್ಥೂಲವಾಗಿ ಹೇಳಬೇಕೆಂದರೆ : ಬೇರೆ ಯಾವುದೋ ಆಧಾರದ ಮೇಲೆ ಆಗಲೇ ಸ್ಥಾಪಿತವಾದಿರುವ ವಿರೋಧಿ ಅಥವಾ ಆಳುವ ಗುಂಪುಗಳೇ, ಇಸ್ಲಾಂನ ರಕ್ಷಣೆಯ ಮತ್ತು ಪುನರುತ್ಥಾನದ ಘೋಷಣೆಗಳನ್ನು ಹಾಕುತ್ತವೆ. ಈ ಘೋಷಣೆಗಳ ಉದ್ದೇಶ: ವಿವಿಧ ಸಾಮಾಜಿಕ-ಆರ್ಥಿಕ ಹಿತಾಸಕ್ತಿಗಳಿರುವ ಬೇರೆ ಬೇರೆ ಸಾಮಾಜಿಕ ಗುಂಪುಗಳಲ್ಲಿ ಸೈದ್ಧಾಂತಿಕ ಐಕ್ಯತೆ ಮೂಡಿಸುವ ಪ್ರಯತ್ನ. ಇರಾನ್‌ನದ್ದು ಮಾತ್ರ ವಿಶಿಷ್ಟ ಪರಿಸ್ಥಿತಿ. ಇಲ್ಲಿ ಈಗಾಗಲೇ ವಿವರಿಸಿರುವ ಕಾರಣಗಳಿಂದ ಮುಸ್ಲಿಂ ನಾಯಕರು ನೇರವಾಗಿ ರಾಜಕೀಯ ಮತ್ತು ಕ್ರಾಂತಿಕಾರಿ ಪಾತ್ರ ವಹಿಸಿದರು. ಈ ಬೆಳವಣಿಗೆಗೆ ಶಿಯಾ ಪಂಥದ ಧಾರ್ಮಿಕ ಮತ್ತು ಸಂಘಟನಾತ್ಮಕ ವಿಶಿಷ್ಟತೆಗಳೂ ಸಹಾಯಕವಾದವು".

ಇದು ಇರಾನಿನ ಇಸ್ಲಾಮಿಕ್ ಕ್ರಾಂತಿಯ ಮತ್ತು ಇತರ ಮುಸ್ಲಿಂ ದೇಶಗಳ ಇಸ್ಲಾಂ ಪುನರುತ್ಥಾನವಾದಿ ಚಳುವಳಿಯ ಸಾಮಾಜಿಕ-ಆರ್ಥಿಕ ಆಧಾರಗಳ ವಿಶ್ಲೇಷಣೆ. ಆದರೂ ಇಸ್ಲಾಂ ಮಾತ್ರ ಈ ರೀತಿ ರಾಜಕೀಯ ಹಾಗೂ ಕ್ರಾಂತಿಕಾರಿ ಪಾತ್ರ ವಹಿಸಲು ಸಾಧ್ಯವಾಗಿದೆ. ಬೇರೆ ಯಾವುದೇ ಧರ್ಮ ಏಕೆ ಈ ರೀತಿ ಪಾತ್ರವಹಿಸಲು ಸಾಧ್ಯವಾಗಿಲ್ಲ? ಇಸ್ಲಾಂ ವಿಶೇಷವಾಗಿ ವಿದ್ಯಾರ್ಥಿಗಳು ಮತ್ತು ಅಸಂಘಟಿತ ಕಾರ್ಮಿಕರನ್ನು ರಾಜಕೀಯವಾಗಿ ಸಂಘಟಿತವಾಗಲು ಆಕರ್ಷಿಸುವುದು ಕಂಡು ಬಂದಿದೆ.

ಇದಕ್ಕೆ ಇಸ್ಲಾಂನ ಕೆಲವು ವಿಶಿಷ್ಟ ಗುಣಗಳೇ ಕಾರಣ. ಇಸ್ಲಾಂ ಇತ್ತೀಚಿನ ದೊಡ್ಡ ಧರ್ಮಗಳಲ್ಲಿ ಕೊನೆಯದು ಎನ್ನಬಹುದಾದ ಧರ್ಮ, ಆದ್ದರಿಂದ ಇದರಲ್ಲಿ ಧಾರ್ಮಿಕ ಪುರಾಣ (mythology) ಮತ್ತು ಧಾರ್ಮಿಕ ವಿಧಿಗಳು (rithals) ಅತಿ ಕಡಿಮೆ ಇವೆ. ಉಳಿದ ಧರ್ಮಗಳಿಗೆ ಹೋಲಿಸಿದರೆ, ಇದು ತೀರಾ ಸರಳ, ನೇರವಾಗಿದ್ದು ಬೇರೆ ಬೇರೆ ನಿರೂಪಣೆಗಳಿಗೆ, ಆಧ್ಯಾತ್ಮಿಕ ಬೌದ್ಧಿಕ ಚರ್ಚೆಗಳಿಗೆ ಗುರಿಯಾಗುವ ಸಂಭವ ಕಡಿಮೆ. ಆಧುನಿಕ ನಗರವಾಸಿ ಪ್ರಾಚೀನವಾದ, ಈಗ ಅರ್ಥವಿಲ್ಲದ ವಿಧಿವಿಧಾನಗಳನ್ನು, ವಿಪರೀತ ಆಧ್ಯಾತ್ಮಿಕ ಚರ್ಚೆಗಳನ್ನು ಇಷ್ಟಪಡುವುದಿಲ್ಲ. ಈ ಎಲ್ಲಾ ಗುಣಗಳನ್ನು ಇಸ್ಲಾಂ ಹೊಂದಿರುವುದರಿಂದ ಈ ದೇಶಗಳ ನಗರವಾಸಿಗಳಿಗೆ ಇದು ಆಕರ್ಷಕವಾಗಿ ಕಂಡಿರಬೇಕು.

—ವಸಂತ

●

ನಾಗರಿಕ ಸುರಕ್ಷಾ ಸಮಿತಿ ರಚನೆ

ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಕಾಂಗ್ರೆಯೇತರ ರಾಜಕೀಯ ಪಕ್ಷಗಳ, ಸಾರ್ವಜನಿಕ ಸಂಘ ಸಂಸ್ಥೆಗಳ ಹಾಗೂ ನಾಗರಿಕ ಪ್ರತಿನಿಧಿಗಳ ಸಭೆಯು ದಿನಾಂಕ 9-10-1980ರಂದು ಸೋಂದವರ ಕ್ರಿಯಾಸಮಿತಿಯ ಆಶ್ರಯದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ವಿ ಸುಕುಮಾರ್ ವಹಿಸಿದ್ದರು.

ಸರಕಾರದ ವಿವಿಧ ಕಛೇರಿಗಳಲ್ಲಿ ಹಬ್ಬುತ್ತಿರುವ ಭ್ರಷ್ಟಾಚಾರ, ಬಡಜನತೆಗಾಗುತ್ತಿರುವ ಅನ್ಯಾಯ, ತಾಲ್ಲೂಕಿನಲ್ಲಿ ಹೆಚ್ಚಾಗುತ್ತಿರುವ ಪೋಲೀಸ್ ದೌರ್ಜನ್ಯ, ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರುತ್ತಿರುವುದು ಮತ್ತು ಸಕ್ಕರೆ, ಸೀಮೆ ಎಣ್ಣೆ ಮುಂತಾದ ವಸ್ತುಗಳ ವಿತರಣೆಯಲ್ಲಿ ವಂಚನೆಯ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಮೇಲ್ಕಂಡ ಸಮಸ್ಯೆಗಳ ಪರಿಹಾರಕ್ಕೆ ಹೋರಾಟವೊಂದೇ ದಾರಿಯೆಂದು ಮನಗಾಣಲಾಯಿತು. ಹೋರಾಟವನ್ನು ಸಂಘಟಿಸಲು ವಿ. ಸುಕುಮಾರ್ ಮತ್ತು ಸಿ ಆರ್ ಪಾರ್‌ರವರ ಸಂಚಾಲಕತ್ವದಲ್ಲಿ "ನಾಗರಿಕ ಸುರಕ್ಷಾ ಸಮಿತಿ" ರಚಿಸಲಾಯಿತು.

ದಬ್ಬಾಳಿಕೆ, ಪೋಲೀಸ್ ದೌರ್ಜನ್ಯಗಳ ಬಗ್ಗೆ ಪ್ರತಿಭಟಿಸಲು ತಾ, 16-10-1980ರಂದು ಸಕಲೇಶಪುರದಲ್ಲಿ ಮತಪ್ರದರ್ಶನ ನಡೆಸಲು "ನಾಗರಿಕ ಸುರಕ್ಷಾ ಸಮಿತಿ"ಯು ತೀರ್ಮಾನಿಸಿತ್ತು.

○

ಅಧ್ಯಾಪಕರ ಮೇಲೆ ಚಾರ್ಜ್ ಷೀಟ್ ಜಾರಿಗೆ ಖಂಡನೆ

ಶಿವಮೊಗ್ಗೆಯ ದೇಶೀಯ ವಿದ್ಯಾಶಾಲೆಯ ಆಡಳಿತ ಮಂಡಳಿಯು ಅಧ್ಯಾಪಕ ಸತ್ಯನಾರಾಯಣರಾವ್ ಅಣತಿಯವರ ಮೇಲೆ ಚಾರ್ಜ್‌ಷೀಟ್ ಜಾರಿಮಾಡಿರುವುದನ್ನು ಪ್ರಜಾಸತ್ತಾತ್ಮಕ ಯುವಜನ ಸಂಘಟನೆ ಖಂಡಿಸಿದೆ. ದತ್ತಬಾಳ ಬಂದಾಗ ಅಣತಿ ಘೋಷಣೆ ಕೂಗಿದರೆಂದು ಜವಾಬ್ದನೆ ಮಾಡಲಾರಿದೆ. ಪುರೋಗಾಮಿ ಅಧ್ಯಾಪಕರ ಮೇಲೆ ಕ್ರಮಕೈಗೊಳ್ಳುವ ಆಡಳಿತ ಮಂಡಳಿಯನ್ನು ಪ್ರತಿಭಟಿಸುವುದು ಎಲ್ಲ ವಿಚಾರವಾದಿಗಳ ಕರ್ತವ್ಯವಾಗಿದೆ.

ಚಾರ್ಜ್‌ಷೀಟ್ ಅನ್ನು ಹಿಂತೆಗೆದುಕೊಳ್ಳಲು ಯುವಜನ ಸಂಘಟನೆ ಒತ್ತಾಯಿಸುತ್ತದೆ. ಇಲ್ಲವಾದಲ್ಲಿ ತೀವ್ರತರ ಪ್ರತಿಭಟನೆಯನ್ನು ಆಡಳಿತ ಮಂಡಳಿ ಎದುರಿಸಬೇಕಾಗುತ್ತದೆ.

ಕಾನೂನುರಹಿತ ಕಾನೂನಿಗೆ ಬೆಳೆಯುತ್ತಿರುವ ವಿರೋಧ

[ಒಂದನೇ ಪುಟದಿಂದ]

ಸರ್ಕಾರ ಯಾವ ದಿಕ್ಕಿನಲ್ಲಿ ಚಲಿಸುತ್ತಿದೆ ಎಂಬುದನ್ನು ಇವು ತೋರಿಸುತ್ತವೆ. ದೆಹಲಿಯಲ್ಲಿ ಭದ್ರತಾ ಕಾಯಿದೆಯ ಪ್ರಕಾರ ಬಂಧಿಸಿದವರ ಪಟ್ಟಿ ತಯಾರಿಸಲು ಭಿಂದರ್‌ಗೆ ಅಧಿಕಾರ ಕೊಡಲಾಗಿದೆ. ಇದನ್ನು ಜಗಮೋಹನ್ ಸಮ್ಮತಿಸಲಿದ್ದಾರೆ. ನವದೆಹಲಿ ಮುನಿಸಿಪಲ್ ಸಮಿತಿಯನ್ನು ವಿಸರ್ಜಿಸಿದ್ದು ಅಕ್ರಮ ಎಂದು ಕಳೆದ ತಿಂಗಳು ಶ್ರೇಷ್ಠ ನ್ಯಾಯಾಲಯ ತೀರ್ಪು ನೀಡಿದೆ.

ಈ ನಾಗರಿಕ ಹಕ್ಕುಗಳ ದಮನವನ್ನು ಪ್ರತಿಭಟಿಸಲು ಆರು ಪಕ್ಷಗಳ ಒಕ್ಕೂಟದ ಸೆಪ್ಟೆಂಬರ್ 27, 28ರ ಅಧಿವೇಶನ ಕರೆಕೊಟ್ಟಿದೆ. ಮಧು ಲಿಮಯೆ ಇದನ್ನು "ಅದೇ ಕರಾಳ ಕಾಯಿದೆ" ಎಂದಿದ್ದಾರೆ. ತಾರಕೇಶ್ವರಿ ಸಿನ್ಹಾ ಅವರು ತುರ್ತುಪರಿಸ್ಥಿತಿಯ ಕಾಯಿದೆಗಳನ್ನು ಹಿಂಬಾಗಿಲಿನಿಂದ ತರಲಾಗುತ್ತಿದೆ ಎಂದಿದ್ದಾರೆ. ಜನತೆಯ ಚಳುವಳಿಗಳನ್ನು ಶ್ರೀಮತಿ ಗಾಂಧಿ ದಮನ ಮಾಡುತ್ತಿದ್ದಾರೆ ಎಂದು ಸಿ. ಪಿ. ಐ. ಆಪಾದಿಸಿದೆ. ಎಲ್ಲ ಪ್ರಜಾಪ್ರಭುತ್ವವಾದಿ ಶಕ್ತಿಗಳೂ ಈ ಕ್ರಮವನ್ನು ಜಂಟಿಯಾಗಿ ವಿರೋಧಿಸಬೇಕೆಂದು ಮಾರ್ಕ್ಸ್‌ವಾದಿ ಪಕ್ಷದ ಪೊಲಿಟ್‌ಬ್ಯೂರೋ ಕರೆಕೊಟ್ಟಿದೆ. ಈ ದುಷ್ಟ ಕ್ರಮವನ್ನು ಹಿಮ್ಮೆಟ್ಟಿಸಬೇಕೆಂದು ಮಧುದಂಡವತೆ ಕರೆಕೊಟ್ಟಿದ್ದಾರೆ. ಕಾಂಗ್ರೆಸ್ ಸರ್ವಾಧಿಕಾರಿಯಾಗುತ್ತಿದೆ ಎಂದು ಜನತಾ ಅಧ್ಯಕ್ಷ ಚಂದ್ರಶೇಖರ್ ಎಲ್ಲ ಭಾಷಣಗಳಲ್ಲಿ ಹೇಳುತ್ತಿದ್ದಾರೆ. ಇದು ಪಾಪಕರ ಕ್ರಮ ಎಂದು ಸಿಕಂದರ್ ಭಕ್ತ್ ಹೇಳಿದ್ದಾರೆ. ಈ ಕ್ರಮವನ್ನು ವಾಪಸ್ಸು ತಗೆದುಕೊಳ್ಳಬೇಕೆಂದು ಸಿ. ಐ. ಟಿ. ಯು., ಎ. ಐ. ಟಿ. ಯು., ಸಿ. ಹೆಚ್. ಎಂ. ಎಸ್., ಬಿ. ಎಂ. ಎಸ್.ಗಳು ಒತ್ತಾಯಿಸಿವೆ.

ಈ ಕರಾಳ ಕಾಯಿದೆಯನ್ನು ಹಿಂತೆಗೆದುಕೊಳ್ಳಬೇಕೆಂದು ಅಕ್ಟೋಬರ್ 2ರ ಮಹಾರಾಷ್ಟ್ರ ಸತ್ಯಾಗ್ರಹ ಒತ್ತಾಯಿಸಿದೆ. ಬಿಹಾರದ ಐದು ವಿರೋಧ ಪಕ್ಷಗಳು, ಬಂಗಾಳದ ನಾಲ್ಕು ಯುವ ಸಂಘಟನೆಗಳು, ವಾಮರಂಗ ಸಮಿತಿ, ಪಂಜಾಬಿನ ವಿರೋಧ ಪಕ್ಷಗಳು, ತಮಿಳುನಾಡಿನ ಟ್ರೇಡ್‌ಯೂನಿಯನ್‌ಗಳು ಈ ಕಾಯಿದೆಯನ್ನು ಪ್ರತಿಭಟಿಸುವ ಅನೇಕ ಕಾರ್ಯಕ್ರಮಗಳನ್ನು ನಡೆಸಿವೆ. ಬಿ. ಜೆ. ಪಿ. ಮತ್ತು ಜನತಾ ಪ್ರತ್ಯೇಕ ಚಳುವಳಿಗಳನ್ನು ಹೂಡಿವೆ. ಜನತಾ (ಎಸ್) ಕೂಡ ಚಳುವಳಿ ಹೂಡಿದೆ.

ಪ್ರಸಿದ್ಧ ನ್ಯಾಯವಾದಿಗಳು, ಬುದ್ಧಿಜೀವಿಗಳು ಈ ನಾಗರಿಕ ಹಕ್ಕುಗಳ ದಮನವನ್ನು ಖಂಡಿಸಿದ್ದಾರೆ.

●

ಸಂಪಾದಕೀಯ

[ಒಂದನೇ ಪುಟದಿಂದ]

1961ರಿಂದ 1971ರ ತನಕ ಅಸ್ಸಾಮಿಗೆ ಬಂದು ನೆಲಸಿದವರ ಭವಿಷ್ಯದ ಬಗ್ಗೆ, ಅಂದರೆ ಅವರನ್ನು ಎಲ್ಲಿಗೆ ಕಳುಹಿಸುವುದು ಎಂಬುದರ ಬಗ್ಗೆ ಒಮ್ಮತಕ್ಕೆ ಬಾರದೆ ಮಾತುಕತೆ ಮುರಿದಿದೆಯೆಂದು ವರದಿಯಾಗಿದೆ. ಅಸ್ಸಾಮ್ ಚಳುವಳಿಗಾರರು ಇವರನ್ನು ಅಸ್ಸಾಮಿನಿಂದ ಬೇರೆಡೆಗೆ ಕಳುಹಿಸಬೇಕೆಂಬ ಶರ್ತವನ್ನು ಹಾಕಿದ್ದಾರೆ. ಆದರೆ "ಕಾಂ. ಜ್ಯೋತಿಬಸು ಅವರೂ ಹೇಳಿದಂತೆ 1961ರಿಂದ 1971ರ ತನಕ ಬಂದವರನ್ನು ಎಲ್ಲಿಗೆ ಕಳುಹಿಸುವಿರಿ? ಖಂಡಿತ ನೇಪಾಲ ಅಥವಾ ಬಾಂಗ್ಲಾ ದೇಶ, ಆದರೆ ಈ ಎರಡೂ ದೇಶಗಳು ಇದಕ್ಕೊಪ್ಪಲಾರವು. ಹಾಗಾದರೆ ಈ ಜನರನ್ನು ಬಲಾತ್ಕಾರವಾಗಿ ಬೇರೆ ರಾಜ್ಯಗಳಿಗೆ ಕಳುಹಿಸಬೇಕು. ಇದಕ್ಕೆ ಬೇರೆ ರಾಜ್ಯಗಳು ಒಪ್ಪಿಯಾವೇ? ಈ ಕಾರಣಗಳಿಂದಲೇ ಮಾತುಕತೆ ವಿಫಲವಾಗಿದೆ.

ವಾಸ್ತವಿಕತೆಯನ್ನು ಒಪ್ಪಿಕೊಂಡು, ಇತ್ತೀಚೆಗೆ ಅಸ್ಸಾಮಿಗೆ ಬಂದವರ ಬಗ್ಗೆ ಕ್ರಮವಹಿಸಿ, ಅಸ್ಸಾಮಿನ ಸರ್ವತೋಮುಖ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಕೇಂದ್ರವನ್ನು ಒತ್ತಾಯಿಸುವಂತ ಕ್ರಮಗಳನು ಚಳುವಳಿಗಾರರು ಅನುಸರಿಸಬೇಕು. ಹಾಗಿದ್ದರೇನೇ ಪರಿಹಾರ ಸಾಧ್ಯ. ಆದರೆ ಚಳುವಳಿಗಾರರ ಹಿಂದಿರುವ ಸ್ಥಾಪಿತ ಹಿತಾಸಕ್ತಿಗಳು ಹೀಗಾಗಲು ಬಿಡುವವೇ ಎಂಬುದೇ ಪ್ರಶ್ನೆ.

○

ಕೊಕ್ಕೊ ಕೆಲಸಗಾರರ ಸಂಘದ ಮಹಾಸಭೆ

ದಿನಾಂಕ 5-10-80ರಂದು ದ. ಕ. ಜಿಲ್ಲಾ ಪುತ್ತೂರು ತಾಲ್ಲೂಕು ಬಿಳಿನೆಲೆಯಲ್ಲಿ ಕೊಕ್ಕೊ ಕೆಲಸಗಾರರ ಸಂಘದ ವಾರ್ಷಿಕ ಮಹಾಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಕುಶಾಲಪ್ಪನವರು ವಹಿಸಿದ್ದು, ಮುಖ್ಯ ಅತಿಥಿಗಳಾಗಿ ತೋಟ ಕೆಲಸಗಾರ ಸಂಘದ ಅಧ್ಯಕ್ಷ ಕಾಂ. ಸೂರ್ಯನಾರಾಯಣ ಭಟ್ ಮತ್ತು ಕಾಂ. ಬಿ. ರಾಮಕೃಷ್ಣನವರು ಉಪಸ್ಥಿತರಿದ್ದರು.

ಕಾಂ. ಸೂರ್ಯನಾರಾಯಣ ಭಟ್ಟರು ಮಾತನಾಡಿ ಕೊಕ್ಕೊ ಕೆಲಸಗಾರರನ್ನು ಸರಕಾರದ ಖಾಯಂ ನೌಕರರೆಂದು ಪರಿಗಣಿಸಲು ಈಗಾಗಲೇ ಕಾನೂನು ಜಾರಿಯಾಗಲು ಸಿದ್ಧವಿದ್ದರೂ, ಸರಕಾರದ ವಿಳಂಬ ನೀತಿಯಿಂದ ಈ ಕಾನೂನು ಜಾರಿಯಾಗಿಲ್ಲ. ದುಡಿಯುವ ವರ್ಗದ ಬಲಿಷ್ಠವಾದ ಸಂಘಟನೆ ಮತ್ತು ತೀವ್ರವಾದ ಹೋರಾಟವಿದ್ದರೆ ಮಾತ್ರ ಕಾರ್ಮಿಕರ ಬೇಡಿಕೆಗಳು ಈಡೇರಲು ಸಾಧ್ಯವೆಂದು ತಿಳಿಸಿ, ಕೇರಳದಲ್ಲಿ ಇತ್ತೀಚೆಗೆ ನಡೆದ ರಬ್ಬರ್ ಕಾರ್ಮಿಕರ ಯಶಸ್ವಿ ಹೋರಾಟದ ಉದಾಹರಣೆಯನ್ನಿತ್ತು ಕಾರ್ಮಿಕರು ಧೃತಿಗಡದೆ ನ್ಯಾಯಕ್ಕಾಗಿ ನಡೆಯುವ ಹೋರಾಟವನ್ನು ಯಶಸ್ವಿಗೊಳಿಸಬೇಕೆಂದು ತಿಳಿಸಿದರು.

ನಂತರ ಕಾಂ. ಬಿ. ರಾಮಕೃಷ್ಣ ಅವರು ಮಾತನಾಡುತ್ತಾ "ಕಾರ್ಮಿಕರ ಶೋಷಣೆ ನಿಲ್ಲಬೇಕಾದರೆ ಶೋಷಣೆಗೆ ಮೂಲಕಾರಣವಾದ ಇಂದಿನ ವ್ಯವಸ್ಥೆ ಕೊನೆಗೊಂಡಾಗ ಮಾತ್ರ" ಎಂದರು.

ಸರಕಾರಿ ಮಾಲೀಕತ್ವದ ಎಲ್ಲಾ ಕೊಕ್ಕೊ ತೋಟಗಳಲ್ಲಿ ಸಂಘಟನೆಯನ್ನು ವಿಸ್ತರಿಸಬೇಕೆಂದು ತೀರ್ಮಾನಿಸಲಾಯಿತು.

●

ಸಂಯುಕ್ತ ಹೋರಾಟಕ್ಕೆ ರಾಜ್ಯಸಮಿತಿ ಕರೆ

[ಒಂದನೇ ಪುಟದಿಂದ]

ಸಂಘವನ್ನು ಮಾನ್ಯತೆ ಮಾಡದೇ ಕಾರ್ಮಿಕ ಹೋರಾಟವನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿರುವದನ್ನು ಖಂಡಿಸಲಾಯಿತು.

ಸರಕಾರೀ ಸ್ವಾಮ್ಯಕ್ಕೊಳಪಟ್ಟ ಕುದುರೆಮುಖದ ಎಚ್. ಎಸ್. ಸಿ. ಎಲ್. ಕಂಪನಿಯಲ್ಲಿ 239 ಕೆಲಸಗಾರರನ್ನು ರಿಟ್ರೆಂಚ ಮಾಡಿರುವುದರ ವಿರುದ್ಧವಾಗಿ ಎಚ್. ಎಸ್. ಸಿ. ಎಲ್. ಕಾರ್ಮಿಕರು ನಡೆಸಿರುವ ಹೋರಾಟಕ್ಕೆ ಬೆಂಬಲವೀಯಲು ನಿರ್ಧರಿಸಲಾಯಿತು.

ದ. ಕ. ಜಿಲ್ಲೆಯಲ್ಲಿ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ಗೇರುಬೀಜ ಕಾರ್ಮಿಕರ ಹೋರಾಟಕ್ಕೂ ಮತ್ತು ದ. ಕ. ಜಿಲ್ಲಾ ರಿಕ್ಷಾ ಚಾಲಕರ ಹೋರಾಟ ತೀವ್ರವಾಗಿ ಮುಂದುವರಿದಿದ್ದರೂ ಸರಕಾರ ಮತ್ತು ಕಾರ್ಮಿಕ ಇಲಾಖೆ ನಿರ್ಲಕ್ಷ್ಯದಿಂದಿರುವದನ್ನು ಉಗ್ರವಾಗಿ ಖಂಡಿಸಿ ಕೂಡಲೇ ಕ್ರಮ ತೆಗೆದುಕೊಳ್ಳುವಂತೆ ಸಂಬಂಧಪಟ್ಟವರನ್ನು ರಾಜ್ಯಸಮಿತಿ ಒತ್ತಾಯಿಸಿದೆ.

ಸಂತಾಪ ಸೂಚನೆ :

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮಂಗಳೂರು ಜಿಲ್ಲಾ ಸಮಿತಿಯ ಸದಸ್ಯ ಮತ್ತು ಪಕ್ಷದ ಹಿರಿಯ ಮುಂದಾಳು ಕಾಂ. ಎ. ಕೆ. ನಾರಾಯಣ ಮತ್ತು ಬೀದರಿನ ಹಿರಿಯ ಮುಂದಾಳಾದ ಕಾಂ. ಖಮರುದ್ದೀನರ ನಿಧನದ ಬಗ್ಗೆ ರಾಜ್ಯಸಮಿತಿ ತನ್ನ ತೀವ್ರ ಶೋಕವನ್ನು ವ್ಯಕ್ತಪಡಿಸಿದೆ. ಇತ್ತೀಚೆಗೆ ರಾಜ್ಯವ್ಯಾಪೀ ನಡೆದ ರೈತ ಚಳುವಳಿಯಲ್ಲಿ ಬಾಗೇಪಲ್ಲಿ ಮತ್ತಿತರ ಕಡೆ ಪೋಲೀಸರ ಗೋಲಿಬಾರಿನಿಂದ ಹುತಾತ್ಮರಾದ ಬಾಂಧವರ ನಿಧನದ ಬಗ್ಗೆಯೂ ಸಂತಾಪ ಸೂಚಿಸಿದೆ.

ರಾಜ್ಯಸಮಿತಿಯ ತೀರ್ಮಾನಗಳನ್ನು ಜಾರಿಗೊಳಿಸಿ, ಜನತೆಯ ಸಮಸ್ಯೆಗಳ ಬಗ್ಗೆ ಹೋರಾಡಲೂ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಗಾಗಿ ಮುಂದಾಗುವಂತೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಕರೆಯಿತ್ತಿದೆ.

●

ಬೀಡಿ ಕಾರ್ಮಿಕರ ಬೃಹತ್ ಸಭೆ

ಮಂಗಳೂರಿನ ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ವತಿಯಿಂದ 12-10-80ರಂದು ಬೊಂದೇಲ್ ಜಾರಪದವುನಲ್ಲಿ ಬೀಡಿ ಕಾರ್ಮಿಕರ ಬೃಹತ್ ಸಭೆಯು ಕಾಂ ಕೆ. ಆರ್. ಶ್ರೀಯಾನ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಆರಂಭದಲ್ಲಿ ಸಂಘದ ಕಾರ್ಯದರ್ಶಿ ಕೆ. ಬಾಬು ದೇವಾಡಿಗ ಅವರು ಬೀಡಿ ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯಗಳನ್ನು ವಿವರಿಸಿದರು. ಕಾರ್ಮಿಕರ ಹಲವಾರು ಬೇಡಿಕೆಗಳನ್ನೂ ಒತ್ತಾಯಿಸಿ 28-10-80 ರಿಂದ ಮಂಗಳೂರಿನ ಲೇಬರ್ ಕಮೀಷನರ ಕಛೇರಿಯ ಮುಂದೆ ಧರಣಿ-ಸತ್ಯಾಗ್ರಹ ಹೂಡಲೂ ಅವರು ಸೂಚಿಸಿದರು.

ಕಾಂ. ಶ್ರೀಯಾನ್ ಅವರು ಅಸಂಘಟಿತರಾಗಿ ಉಳಿದಿರುವ ಬೀಡಿ ಕಾರ್ಮಿಕರು ಸಂಘಟಿತರಾಗಲು ಕರೆಕೊಟ್ಟರು. 28 ರಿಂದ ನಡೆಯುವ ಸತ್ಯಾಗ್ರಹದಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಅವರು ಕಾರ್ಮಿಕರಲ್ಲಿ ವಿನಂತಿಸಿಕೊಂಡರು.

○

ಹೋರಾಟಗಳನ್ನು ಬೆಂಬಲಿಸಿ ಸೌಹಾರ್ದ ಸಭೆ

ಬೆಂಗಳೂರು ಜಿಲ್ಲಾ ಸಿ. ಐ. ಟಿ. ಯು. ಆಶ್ರಯದಲ್ಲಿ ತಾರೀಕು 21-10-80ರಂದು ವೈಟ್‌ಫೀಲ್ಡ್ ರಸ್ತೆಯ ಸಿಂಗಯ್ಯನ ಪಾಳ್ಯದಲ್ಲಿ ನಡೆಯಲಾಯಿತು.

ಹಲವಾರು ತಿಂಗಳುಗಳಿಂದ ಹೋರಾಟಮಾಡುತ್ತಿರುವ ಕಾರ್ಮಿಕರ ಬೆಂಬಲವಾಗಿ, ಮೆಟಲ್ ಲ್ಯಾಂಪ್ಸ್ ಕ್ಯಾಪ್ಸ್ ಮತ್ತು ಟೆಲಿಕಾರ್ ಪ್ರಾಡಕ್ಟ್ಸ್, ದೂರವಾಣಿ ಕೇಬಲ್ಸ್ ಕಾರ್ಮಿಕರುಗಳು ತಮ್ಮ ಬೇಡಿಕೆಗಾಗಿ ಹೋರಾಟ ನಡೆಸುತ್ತಿದ್ದಾರೆ.

ಬೋನಸ್ಸ್ ಹೋರಾಟದಲ್ಲಿ ಐ. ಟಿ. ಐ ನಲ್ಲಿ 16 ಜನ ಕಾರ್ಮಿಕರನ್ನು ಆಡಳಿತವರ್ಗ ಸಸ್‌ಪೆಂಡ್ ಮಾಡಿರುವುದಲ್ಲದೆ 43 ಜನರ ಮೇಲೆ ಪೋಲೀಸ್ ವಾರೆಂಟ್ ಕೊಟ್ಟಿರುವ ವಿರುದ್ಧ ಖಂಡಿಸಲಾಯಿತು. ಈ ಸಭೆಯನ್ನು ಉದ್ದೇಶಿಸಿ ಕಾಂ. ಎಸ್. ಸೂರ್ಯನಾರಾಯಣರಾವ್ ಅಧ್ಯಕ್ಷರು ಸಿ. ಐ. ಟಿ. ಯು. ರಾಜ್ಯಸಮಿತಿ ಕಾಂ. ನೀಲಕಂಠಯ್ಯ ಪ್ರಧಾನ ಕಾರ್ಯದರ್ಶಿ ವೈಕೋ ಕಾರ್ಮಿಕ ಸಂಘ, ಕಾಂ. ರಾಮಯ್ಯ ವೈಕೋ ಕಾರ್ಮಿಕ ಮುಂದಾಳು, ಕಾಂ. ನಾರಾಯಣರಾವ್ ಜಾನ. ಉಪಾಧ್ಯಕ್ಷ ಜಿಲ್ಲಾ ಸಿ. ಐ. ಟಿ. ಯು. ಕಾಂ. ಜಾನ್‌ವಿನ್‌ಸೆಂಟ್ ಕಾರ್ಯದರ್ಶಿ ಬೆಂಗಳೂರು ಈಸ್ಟ್ ಇಂಡಸ್ಟ್ರಿಯಲ್ ವರ್ಕರ್ಸ್ ಯೂನಿಯನ್ ಇವರುಗಳು ಆಡಳಿತವರ್ಗದ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ. ಡಿ. ವಿ. ಪಾಟೀಲ ವಹಿಸಿದ್ದರು.

○

ಬಸ್ ಕಾರ್ಮಿಕರ ಮೇಲೆ ಸಬ್‌ಇನ್ಸ್‌ಪೆಕ್ಟರ್ ದೌರ್ಜನ್ಯ

ಬೀದರ್‌ನ ನವರಂಗ ಖಾಸಗಿ ಬಸ್ಸು 9-10-80ರ ರಾತ್ರಿ ತನ್ನ ನಿಲ್ದಾಣದಲ್ಲಿ ನಿಂತಿತ್ತು. ಆಗ ಸಬ್‌ಇನ್ಸ್‌ಪೆಕ್ಟರ್ ಮಾರುತಿರಾವ್ ಬಂದು ತನ್ನ ಖಾಸಗಿ ಕೆಲಸಕ್ಕೆ 6 ಕಿ. ಮೀ. ದೂರದ ಚಂದಾಪುರ ಗ್ರಾಮಕ್ಕೆ ಬಸ್ ನಡೆಸಲು ಕೇಳಿದನು. ಇದಕ್ಕೆ ಬಸ್ಸಿನ ಡ್ರೈವರ್ ಮತ್ತು ಕಂಡಕ್ಟರ್, ಮಾಲೀಕರ ಅಪ್ಪಣೆ ಇಲ್ಲದೆ ಹೋಗುವಂತಿಲ್ಲ ಎಂದರು. ಆಗ ಸಬ್‌ಇನ್ಸ್‌ಪೆಕ್ಟರ್ ಕೋಪದಿಂದ ಡ್ರೈವರ್ ಇಬ್ರಾಹಿಂ ಮತ್ತು ಕಂಡಕ್ಟರ್ ಸಂಗಯ್ಯನನ್ನು ಬಂಧಿಸಿ ಪೋಲೀಸ್ ಠಾಣೆಗೆ ಒಯ್ದು ಬೂಟಿನಿಂದ ಒದ್ದು, ಮೈ ತುಂಬ ಬೆಲ್ಟಿನಿಂದ ಹೊಡೆದು ಹಿಂಸಿಸಿದ್ದಾನೆ.

ರಾತ್ರಿ 2 ಗಂಟೆಗೆ ಈ ಸುದ್ದಿ ತಿಳಿದಾಗ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾಂ. ಸಂಗ್ರಾಮ್ ಮತ್ತು ಡ್ರೈವರ್ಸ್ ಮತ್ತು ಕ್ಲೀನರ್ಸ್ ಸಂಘದ ಅಧ್ಯಕ್ಷ ಸುಭಾಷ ಗಾದಗೆ ಅವರು ಚಿಂಚೋಳಿ ಪೋಲೀಸ್ ಠಾಣೆಗೆ ಬಂದರು. ಇಬ್ರಾಹಿಂ ಮತ್ತು ಸಂಗಯ್ಯ ಹೊಡೆತದಿಂದ ನರಳುತ್ತಾ ಭಯಭೀತರಾಗಿದ್ದರು. ಎಸ್. ಐ. ಕುಡಿದು ಟಿ. ಬಿ. ಬಂಗಲೆಯಲ್ಲಿ ಮಲಗಿದ್ದ. ಹೇಳಿಕಳಿಸಿದಾಗ ಬಂದು ಯಾವ ಉತ್ತರವನ್ನೂ ನೀಡಲಿಲ್ಲ. ನಂತರ ಗುಲ್ಬರ್ಗದ ಎಸ್. ಪಿ. ಗೆ ದೂರವಾಣಿ ಮಾಡಲು ಪ್ರಯತ್ನಿಸಿದಾಗ ಎಂದಿನಂತೆ ಲೈನ್ ಕೆಟ್ಟುಹೋಗಿತ್ತು. ನಂತರ ಬೀದರಕ್ಕೆ ಬಂದು ದೂರು ಕೊಟ್ಟರು. 10-10-80ರಂದು ಎಲ್ಲ ಖಾಸಗಿ ಬಸ್ ಓಡಾಟ ನಿಂತಿತ್ತು. ಪೋಲೀಸ್ ದೌರ್ಜನ್ಯದ ವಿರುದ್ಧ ಪ್ರತಿಭಟಿಸಲಾಯಿತು.

○

ಚಂದಾ ವಿವರ

ಬಿಡಿಪ್ರತಿ	:	50 ಪೈಸೆ
6 ತಿಂಗಳಿಗೆ	:	13 ರೂ.
ಒಂದು ವರ್ಷಕ್ಕೆ	:	25 ರೂ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT